بِسْمِ اللّٰهِ الرَّحْمٰنِ الرَّحِيْمِ     نَحْمَدُهٗ وَنُصَلِّیْ عَلٰی رَسُوْلِهِ الْكَرِيْمِ     وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 48

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

30 ನವೆಂಬರ್ 2023, 30 ನಬುವ್ವತ್ 1402 ಹಿಜರಿ ಶಮ್‌ಸಿ,
15 ಜಮಾದಿಉಲ್ ಅವ್ವಲ್ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَرَاَ الْمُجْرِمُوْنَ النَّارَ
فَظَنُّوْٓا اَنَّهُمْ مُّوَاقِعُوْهَا
وَلَمْ يَجِدُوْا عَنْهَا مَصْرِفًا

**(ಅಲ್ ಕಹಫ್: 54)**

**ಅಂದರೆ: ಅಪರಾಧಿಗಳು ನರಗಾಗ್ನಿಯನ್ನು ದರ್ಶಿಸುವರು. ಆಗ ಅವರು ಅದರೊಳಗೆ ಬೀಳಲಿರುವುದಾಗಿ ಮನಗಾಣುವರು. ಅದರಿಂದ ತಪ್ಪಿಸಿಕೊಳ್ಳುವ ಯಾವ ದಾರಿಯನ್ನೂ ಅವರು ಕಾಣಲಾರರು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಸಾಲದ ಸ್ವಲ್ಪ ಭಾಗ ಕ್ಷಮಿಸುವುದು

**(2418)** ಹಝ್ರತ್ ಕಅ್‌ಬ್(ರ) ವರದಿ ಮಾಡುತ್ತಾರೆ. ಅವರು (ಹಝ್ರತ್ ಅಬ್ದುಲ್ಲ) ಬಿನ್ ಅಬಿ ಹದ್‌ರದ್(ರ) ರವರೊಂದಿಗೆ ಮಸೀದಿಯಲ್ಲಿ ತಮ್ಮ ಸಾಲ ಮರಳಿ ಕೇಳಿದರು. ಅದು ಅವರಿಗೆ ಸೇರಿದ್ದಾಗಿತ್ತು. ಅವರಿಬ್ಬರ ಧ್ವನಿ ಎಷ್ಟು ಜೋರಾಯಿತೆಂದರೆ ಆ ಧ್ವನಿ ರಸೂಲುಲ್ಲಾಹ್(ಸ) ರವರು ಸಹ ಆಲಿಸಿದರು. ಅದಾಗ್ಯೂ ಅವರು ತಮ್ಮ ಮನೆಯಲ್ಲಿದ್ದರು. ಆಗ ಅವರು(ಸ) ತಮ್ಮ ಕೋಣೆಯ ಪರದೆಯನ್ನು ಎತ್ತಿ ಕಅಬ್(ರ) ಅವರನ್ನು ಕರೆದು ಹೇಳಿದರು. ತಮ್ಮ ಈ ಸಾಲದಲ್ಲಿ ಇಷ್ಟನ್ನು ರಿಯಾಯಿತಿ ನೀಡಿ (ಅಂದರೆ ಅವರಿಗೆ ಅರ್ಧದಷ್ಟು ಎಂದು ಸಂಕೇತಿಸಿದರು). ಅದಕ್ಕೆ ಹಝ್ರತ್ ಕಅಬ್(ರ) ಹೇಳಿದರು. ಯಾ ರಸೂಲುಲ್ಲಾಹ್(ಸ) ರವರೇ ಇದಕ್ಕೆ ನಾನು ಒಪ್ಪುತ್ತೇನೆ. ಆಗ ಅವರು(ಸ) (ಅಬ್ದುಲ್ಲ(ರ)) ಅವರಿಗೆ ಹೇಳಿದರು. ಹೋಗಿ ಅವರ ಸಾಲ ತೀರಿಸು.

### ಬಾಜಮಾತ್ ನಮಾಝಿನ ಪ್ರಾಮುಖ್ಯತೆ

**(2420)** ಹಝ್ರತ್ ಅಬೂ ಹುರೈರ(ರ) ರವರು ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ನುಡಿದರು. ನಾನು ನಿಶ್ಚಯಿಸಿದ್ದೇನೆಂದರೆ ನಿಮ್ಮನ್ನು ನಮಾಝ್ ನಿರ್ವಹಿಸಲು ಆದೇಶಿಸಿ ನಮಾಝ್ ಪ್ರಾರಂಭವಾದ ನಂತರ ನಮಾಝ್ ನಿರ್ವಹಿಸಲು ಬಂದಿರದವರ ಮನೆಗೆ ತೆರಳಿ ಅವರು ಮನೆಯೊಳಗೆ ಇದ್ದಾಗ ಅವರ ಮನೆಗಳಿಗೆ ಹೊರಗಿನಿಂದ ಬೆಂಕಿ ಹಚ್ಚಬೇಕು. **(ಸಹೀಹ್ ಬುಖಾರಿ, ಸಂಪುಟ-4, ಕಿತಾಬುಲ್ ಖಸೂಮಾತ್, ಮುದ್ರಣ 2008 ಖಾದಿಯಾನ್)**

### *ವಿಶೇಶ ಸೂಚನೆ*

"ಬದರ್" ವಾರಪತ್ರಿಕೆಯಲ್ಲಿ ತಮ್ಮ ಜಾಹಿರಾತು ನೀಡಲು ಹಾಗೂ ಚಂದಾದರರು ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಪಾವತಿಸಲು ಸಂಪರ್ಕಿಸಿ. ಮೊಬೈಲ್ ಸಂಖ್ಯೆ: 9866358609

(ವ್ಯವಸ್ಥಾಪಕರು)

ಪ್ರವಾದಿಗಳಿಗೆ(ಅಲೈಹಿಮುಸ್ಸಲಾಮ್) ಅವಶ್ಯಕತೆಗಳು ಏಕೆ ಎದುರಾಗುತ್ತದೆ ಎಂದರೆ ಅವರಿಂದ ಲಿಲ್ಲಾಹಿ ವಕ್ಫ್‌ನ (ದೈವಿಕ ದತ್ತಿಯ) ಮಾದರಿಗಳನ್ನು ಉದಾಹರಣೆಯಾಗಿ ಸ್ಥಾಪಿಸಲು ಹಾಗೂ ಅಬುಬಕರ್(ರ) ಅವರ ಜೀವನದ ವಕ್ಫ್ ಸಾಬೀತಾಗಲಿ ಎಂದು ಮತ್ತು ಜಗತ್ತಿನಲ್ಲಿ ಸರ್ವಶಕ್ತನಾದ ಅಲ್ಲಾಹನ ಅಸ್ತಿತ್ವದಲ್ಲಿ ನಂಬಿಕೆ ಸ್ಥಾಪಿತವಾಗಲಿ ಮತ್ತು ಇಂತಹ ಲಿಲ್ಲಾಹಿ ವಕ್ಫ್ (ದೈವಿಕ ದತ್ತಿ) ಆಗಿರುವವರು ಜಗ್ಗತಿಗೆ ದೇವರ ಕುರುಹುಗಳಾಗಿ ಉಳಿಯುತ್ತಾರೆ.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಪ್ರವಾದಿಗಳಿಗೆ(ಅಲೈಹಿಮುಸ್ಸಲಾಮ್) ಅಗತ್ಯಗಳು ಏಕೆ ಎದುರಾಗುತ್ತವೆ?

ನಾನು ಇಲ್ಲಿ ಒಂದು ಪ್ರಮುಖ ವಿಷಯವನ್ನು ಹೇಳಲು ಬಯಸುತ್ತೇನೆ, ಪ್ರವಾದಿಗಳಿಗೆ(ಅಲೈಹಿಮುಸ್ಸಲಾಮ್) ಏಕೆ ಅಗತ್ಯಗಳು ಎದುರಾಗುತ್ತವೆ? ಸರ್ವಶಕ್ತನಾದ ಅಲ್ಲಾಹನು ಅವರಿಗೆ ಯಾವುದೇ ಅಗತ್ಯತೆಗಳಲ್ಲಿ ಕೊರತೆಯಾಗದಂತೆ ನೋಡಿಕೊಳ್ಳಲು ಸಮರ್ಥನಾಗಿದ್ದಾನೆ. ಆದರೆ ಈ ಅಗತ್ಯಗಳು ಏಕೆ ಎದುರಾಗುತ್ತವೆ ಎಂದರೆ ಆದ್ದರಿಂದ ಲಿಲ್ಲಾಹಿ ವಕ್ಫ್ (ದೈವಿಕ ದತ್ತಿ)ಯ ಮಾದರಿಗಳನ್ನು ಉದಾಹರಣೆಯಾಗಿ ಸ್ಥಾಪಿಸಲು ಹಾಗೂ ಹಝ್ರತ್ ಅಬುಬಕರ್(ರ) ಅವರ ಜೀವನದ ದತ್ತಿಯನ್ನು ಸಾಬೀತುಪಡಿಸಲು ಮತ್ತು ಜಗತ್ತಿನಲ್ಲಿ ಸರ್ವಶಕ್ತನಾದ ಅಲ್ಲಾಹನ ಅಸ್ತಿತ್ವದಲ್ಲಿ ನಂಬಿಕೆ ಸ್ಥಾಪಿಸಲು ಮತ್ತು ಇಂತಹ ದೈವಿಕ ದತ್ತಿಯಾದವರು ಇಡೀ ಜಗತ್ತಿಗೆ ಅಲ್ಲಾಹನ ಕುರುಹುಗಳಾಗಿ ಉಳಿದಿರಲು ಮತ್ತು ಆ ರಹಸ್ಯ ಪ್ರೀತಿ ಮತ್ತು ಆನಂದದ ಅರಿವು ಜಗತ್ತಿಗೆ ಆಗಲಿ, ಆ ಪ್ರೀತಿಯ ಮುಂದೆ ಮನುಷ್ಯನಿಗೆ ಬಹಳ ಅಪೇಕ್ಷಣೀಯವಾದಂತಹ ಹಣ ಅಂತಸ್ತುಗಳು ಸರಾಗವಾಗಿ ಮತ್ತು ಸಂತೋಷದಿಂದ ದೈವಿಕ ಮಾರ್ಗದಲ್ಲಿ ಬಲಿದಾನವಾಗಬಹುದು ಮತ್ತು ಹಣ ಆಸ್ತಿ ಅಂತಸ್ತು ಎಲ್ಲವನ್ನು ಬಲಿದಾನವಾದ ನಂತರ ದೈವಿಕ ದತ್ತನ್ನು ಪೂರ್ಣಗೊಳಿಸಲು ಮನುಷ್ಯನು ತನ್ನ ಜೀವವನ್ನು ಸಹ ಅಲ್ಲಾಹನ ಮಾರ್ಗದಲ್ಲಿ ಸಮರ್ಪಿಸಲು ಶಕ್ತಿ ಮತ್ತು ಧೈರ್ಯವನ್ನು ಪಡೆಯುತ್ತಾನೆ.

ಆದ್ದರಿಂದ, ಪ್ರವಾದಿಗಳ(ಅಲೈಹಿಮುಸ್ಸಲಾಮ್) ಅಗತ್ಯಗಳ ಮುಖ್ಯ ಉದ್ದೇಶವೆಂದರೆ ಪ್ರಾಪಂಚಿಕ ಸುಳ್ಳು ಭೋಗಗಳು ಮತ್ತು ನಶಿಸಿಹೋಗುವಂತಹ ವಸ್ತುಗಳಿಂದ ದೂರವಿರಲು ಬೋಧಿಸುವುದು, ಅಲ್ಲಾಹನ ಅಸ್ತಿತ್ವದಲ್ಲಿ ರುಚಿಕರವಾದ ನಂಬಿಕೆಯನ್ನು ಸೃಷ್ಟಿಸುವುದು ಮತ್ತು ಸೃಷ್ಟಿಗಳ ಒಳಿತಿಗಾಗಿ ಸೇವೆ ನೀಡುವ ಸಾಮರ್ಥ್ಯ ಸೃಷ್ಟಿಸುವುದಾಗಿದೆ, ಇಲ್ಲದಿದ್ದರೆ ಈ ಪವಿತ್ರ ಗುಂಪು **ಖಝೂಎನಯಸ್ಸಮಾವಾತಿ ವಲ್ ಅರ್ಝಿ** ಸ್ವರ್ಗ ಮತ್ತು ಭೂಮಿಯ ಅಧಿಪತಿಯಾದ ಪ್ರಭುವಿನ ದೃಷ್ಟಿಯಲ್ಲಿ ನಡೆಯುತ್ತದೆ. ಅವರಿಗೆ ಯಾವುದಾದರ ಅವಶ್ಯಕತೆ ಇದೆಯೇ? ಆ ಅವಶ್ಯಕತೆಗಳು ಪರಿಪೂರ್ಣ ಶಿಕ್ಷಣ ಮತ್ತು ಮನುಷ್ಯನ ನೈತಿಕತೆ ಮತ್ತು ನಂಬಿಕೆಯ ಪ್ರಭಾವಕ್ಕಾಗಿ ಕಾಣಿಸಿಕೊಳ್ಳುತ್ತವೆ." **(ಮಲ್‌ಫೂಝಾತ್, ಸಂಪುಟ-1, ಪುಟ-499, ಪ್ರಕಟಿತ 2018 ಖಾದಿಯಾನ್)**

## *128 ನೇ ಜಲ್ಸಾ ಸಾಲಾನ ಖಾದಿಯಾನ್*
## *29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

### ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ." *(ಫತ್‌ಹೆ ಇಸ್ಲಾಮ್; ರೂಹಾನೀ ಖಝ್ಝಾಇನ್ ಸಂಪುಟ 3, ಪುಟ 12)*

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰه

**"ಮುಜ್‌ಕೋ ಕಾಫಿರ್ ಕಹ್‌ಕೆ ಅಪ್ನೆ ಕುಫ್ರ್ ಪರ್ ಕರ್ತೆ ಹೈಂ ಮುಹರ್ ಎ ತೋ ಹೈ ಸಬ್ ಶಕಲ್ ಉನ್‌ಕೀ ಹಮ್ ತೋ ಹೈಂ ಆಯಿನಾದಾರ್॥"**

ಅನುವಾದ: ನನ್ನನ್ನು ಅವಿಶ್ವಾಸಿ (ಕಾಫಿರ್) ಎಂದು ಘೋಷಿಸಿ ಸ್ವಯಂ ತನ್ನ ಅವಿಶ್ವಾಸವನ್ನು ದೃಡೀಕರಿಸುತ್ತಿದ್ದಾರೆ. ಇವೆಲ್ಲವು ಅವರ ಕಾರಸ್ತಾನವಾಗಿದೆ, ನವು ಕನ್ನಡಿಯಾಗಿದ್ದೇವೆ ಅಷ್ಟೇ.

**(ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ್))...............(9)**

## ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮೇಲೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆ ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ.

ಕಳೆದ ಎಂಟು ಸಂಚಿಕೆಗಳಿಂದ, ನಾವು ಅಹ್ಮದೀಯ ಜಮಾಅತ್‌ನ ಸಂಸ್ಥಾಪಕ, ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ವಾಗ್ದತ್ತ ಮಸೀಹ್ ಮತ್ತು ಮಹದಿ ಅಲೈಹಿಸ್ಸಲಾಮ್ ಅವರ ಬಗ್ಗೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆಯ ಆಕ್ಷೇಪಣೆಗಳಿಗೆ ಪ್ರತಿಕ್ರಿಯಿಸುತ್ತಿದ್ದೇವೆ. ಆಕ್ಷೇಪಣೆಗಳ ವಿವರಗಳು ಮತ್ತು ಅವುಗಳ ಹಿನ್ನೆಲೆಯನ್ನು ಆಗಸ್ಟ್ 17 ರ ಸಂಚಿಕೆಯಲ್ಲಿ ನೋಡಬಹುದು. ಮುನ್ಸಿಫ್ ನ ಆಕ್ಷೇಪಣೆಗಳಲ್ಲಿ ಒಂದು ಹೀಗಿದೆ:

"ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅವರು ಮುಜದ್ದಿದ್, ಮುಹದ್ದಿಸಿಯ್ಯತ್ (ಆವಿಷಕಾರಕ), ಮಹದಿವಿಯ್ಯತ್, ಮಸೀಹಿಯ್ಯತ್, ಝಿಲ್ಲಿ ನಬೀ, ಬರೂಝಿ ನಬೀ, ಹಖೀಖಿ ನಬೀ, ಝಿಲ್ ಮುಹಮ್ಮದ್(ಸ) ಮತ್ತು ಭಗವಂತ ಆಗಿರುವ ಬಗ್ಗೆ ವಾದವನ್ನು ಮಮಡಿದ್ದಾರೆ. ಅದೇನೇ ಇದ್ದರೂ, ಅದನ್ನು ಅನುಸರಿಸುವವರು ತಮ್ಮನ್ನು ಅಹ್ಮದಿ ಮುಸ್ಲಿಮರು ಎಂದು ಕರೆದುಕೊಳ್ಳಲು ಇಷ್ಟಪಡುತ್ತಾರೆ ಮತ್ತು ಇತರೆ ಮುಸ್ಲಿಮರು ಅವರನ್ನು ಹೀಗೆಯೇ ಯೋಚಿಸಬೇಕು ಎಂದು ಭಾವಿಸುತ್ತಾರೆ."

ಹಿಂದಿನ ಮೂರು ಸಂಚಿಕೆಗಳಲ್ಲಿ ನಾವು ಮುಜದ್ದಿದಿಯತ್ (ಧರ್ಮ ಸುಧಾರಕ), ಮುಹದಸ್ಸಿಯತ್, ಮಹದಿವಿತ್, ಸಾದೃಶ್ಯ ಮಸೀಹ್, ಮಸೀಹಿಯತ್ ಮತ್ತು ನಿಜವಾದ ನಬಿಯ ಉತ್ತರಳನ್ನು ನೀಡಿರುತ್ತೇವೆ.

ಇಂದು ನಾವು ಝಿಲ್ಲಿ ಮುಹಮ್ಮದ್ (ಮುಹಮ್ಮದರ ಸಾದೃಶ್ಯ ರೂಪ) ಆಕ್ಷೇಪ ಕುರಿತು ಉತ್ತರ ನೀಡುವೆವು.

ಮುಹಮ್ಮದ(ಸ)ರ ಸಾದೃಶ್ಯ ರೂಪ ಎನ್ನುವುದರಲ್ಲಿ 'ಮುನ್ಸಿಫ್' ಪತ್ರಿಕೆ ಹೈದರಾಬಾದಿನ ಸಂಪಾದಕರಿಗೆ ಯಾವ ಆಕ್ಷೇಪಣೆ ಇದೆ? ಆಕ್ಷೇಪಣೆ ಏಕೆ ಇದೆ? ಇದರಲ್ಲಿ ಶರಿಅತ್ತಿಗೆ ವಿರೋಧವಾದ ಯಾವ ಮಾತಿದೆ? ಸಂಪಾದಕರು ಈ ಕುರಿತು ಏನೂ ಹೇಳಿಲ್ಲ. ಹಝ್ರತ್ ವಾಗ್ದತ್ತ ಮಸೀಹರು (ಅ) ನಿಸ್ಸಂಶಯವಾಗಿಯೂ ಸಾದೃಶ್ಯ ರೂಪದ ಮುಹಮ್ಮದ್ (ಝಿಲ್ಲಿ ಮುಹಮ್ಮದ್) ಎಂಬ ದಾವೆ ಮಾಡಿರುವುದು ನಿಜ. ಆದರೆ ಈ ದಾವೆಯಲ್ಲಿ ಯಾವ ಕೆಡುಕಿದೆ ತೋರಿಸಬೇಕಲ್ಲವೆ. ಸಂಪಾದಕರು ಇಂತಹ ಅಪವಾದ ಎಲ್ಲೋ ಒಂದು ಕಡೆ ನೋಡಿದ್ದನ್ನು ನಕಲು ಮಾಡಿದ್ದಾರೆ ಎನಿಸುತ್ತದೆ. ಇದರಲ್ಲಿ ಅವರ ಸ್ವಂತ ಅಭಿಪ್ರಾಯವೇನಿಲ್ಲ.

"ಮುನ್ಸಿಫ್" ಹೈದರಾಬಾದ್ ಪತ್ರಿಕೆಯ ಸಂಪದಕರ ದೃಷ್ಟಿಯಲ್ಲಿ ಪ್ರವಾದಿವರ್ಯರ ಸಾದೃಶ್ಯ ರೂಪ ಧಾರಣೆ ಮಾಡುವುದು ಪಾಪವೇ? ಅಥವಾ ಶರಿಅತ್ ವಿರೋಧಿ ಕಾರ್ಯವೇ? ಅಥವಾ ಅದರಲ್ಲಿ ಪ್ರವಾದಿ(ಸ) ರವರ ಗೌರವಕ್ಕೆ ಧಕ್ಕೆ ಬರುವುದೇ? ಸಂಪಾದಕರಾದವರಿಗೆ ಏನಾದರೂ ತಿಳಿಸಬಹುದಿತ್ತಲ್ಲ, ತಿಳಿದಿರಲಿ, ಪ್ರವಾದಿ(ಸ) ರವರ ಆಧ್ಯಾತ್ಮಿಕ ಅನುಗ್ರಹ ವೃದ್ಧಿಯ ಪರಿಣಾಮವಾಗಿ, ಯಾರಾದರೂ ಅವರ ಸಾದೃಶ್ಯರಾದರೆ ಅದರಲ್ಲಿ ಪ್ರವಾದಿ(ಸ) ರವರ ಸ್ಥಾನವೇ ಉನ್ನತವಾಗಿರುತ್ತದೆ. ಅದು ಅವರ ಉನ್ನತ ಆಧ್ಯಾತ್ಮಿಕ ಶಕ್ತಿಗೆ ಪುರಾವೆಯಾಗಿದೆ. ಅದರಿಂದ ಅವರ ಸ್ಥಾನಕ್ಕೆ ಚ್ಯುತಿ ಬರುವುದಿಲ್ಲ, ಬದಲು ಹೆಚ್ಚಾಗುತ್ತದೆ. ನಮ್ಮ ಪೂರ್ವ ಮಹಾತ್ಮರುಗಳು ಬರೆದಿದ್ದಾರೆ. ಮುಹಮ್ಮದಿಯ ಸಮುದಯದಿಂದ ಬರುವ ಮಹದಿಯದ್ದು ಮಹೋನ್ನತ ಸ್ಥಾನವಾಗಿರುವುದು, ಅವರು ಪ್ರವಾದಿ(ಸ) ರವರ ಸಾದೃಶ್ಯ ರೂಪವಾಗಿರುವರು. ಅವರ ಅಂತರಂಗ(ಬಾತಿನ್) ಪ್ರವಾದಿ(ಸ) ರವರ ಅಂತರಂಗವಾಗಿರುವುದು. ಪ್ರವಾದಿ(ಸ) ರವರ ಪ್ರಕಾಶಗಳ ಪ್ರತಿಬಿಂಬಿತ ವ್ಯಕ್ತಿವಾಗಿರುವರು ಎಂದರೆ ಅವರು ಪ್ರವಾದಿ(ಸ) ರವರ ಸಾದೃಶ್ಯರೂಪವಾಗಿರುವರು.

ಮಹಾತ್ಮರುಗಳ ಮಹಾಥ್ಮರು ಹಝ್ರತ್ ಮುಹಿಯುದ್ದೀನ್ ಇಬ್ನು ಅರಬಿ (ರಹ) ಹೇಳುತ್ತಾರೆ.

اَلْمَهْدِیُّ الَّذِیْ يَجِيءُ فِیْ اٰخِرِ الزَّمَانِ فَاِنَّهٗ يَكُوْنُ فِی الْاَحْكَامِ الشَّرْعِيَّةِ تَابِعًا لِمُحَمَّدٍ ﷺ وَفِی الْمَعَارِفِ وَالْعُلُوْمِ وَ الْحَقِيْقَةِ تَكُوْنُ جَمِيْعُ الْاَنْبِيَاءِ تَابِعِيْنَ لَهٗ كُلُّهُمْ لِاَنَّ بَاطِنَهٗ بَاطِنُ مُحَمَّدٍ ﷺ (شرح فصوص الحکم مطبعة الزاہر مصریہ صفحہ 52،51)

ಅನುವಾದ: ಅಂತಿಮ ರೂಪದಲ್ಲಿ ಆಗಮಿಸಲಿರುವ ಇಮಾಮ್ ಮಹದಿಯರು ನಿಶ್ಚಿತವಾಗಿಯೂ ಶರೀಅತ್ ಆದೇಶಗಳ ಮೇರೆಗೆ ಪ್ರವಾದಿ (ಸ) ರವರ ಅನುಯಾಯಿಗಳಾಗಿರುವರು ಮತ್ತು ಜ್ಞಾನ ಆಧ್ಯಾತ್ಮಿಕ ಜ್ಞಾನ ಹಾಗೂ ವಾಸ್ತವವಾಗಿ ಎಲ್ಲಾ ಪ್ರವಾದಿಗಳು ಮಹದಿಯನ್ನು ಅನುಸರಿಸುವರು. ಏಕೆಂದರೆ ಅವರ ಅಂತರಂಗ ಪ್ರವಾದಿ (ಸ) ರವರ ಅಂತರಂಗವಾಗಿರುವುದು. (ಶರಹ ಫಸೂಸುಲ್ ಹಕಮ್ ಮತ್ಬತುಝ್ಝಾಹಿರ್, ಮಿಸ್ರಿಯಾ ಪುಟ–51,52)

ಹಝ್ರತ್ ಇಮಾಮ್ ಬಾಖಿರ್(ರಹ) ಹೇಳುತ್ತಾರೆ:

"يَقُوْلُ المهدِیُّ يَا مَعْشَرَ الْخَلَا ئِقِ ...اَلَا وَمَنْ اَرَادَاَنْ يَنْظُرَ اِلٰی ابْرَاهِيْمَ وَاِسْمٰعِيْلَ فَهَا اَنَا ذَا اِبْرَاهِيْمُ وَاِسْمٰعِيْلُ اَلَا وَمَنْ اَرَادَ اَنْ يَّنْظُرَ اِلٰی مُوْسٰی يُوْشَعَ فَهَا اَنَاذَا مُوْسٰی وَيُوْشَعُ اَلَا وَمَنْ اَرَادَاَنْ يَّنْظُرَ اِلٰی مُحَمَّدٍ وَ اَمِيْرِ الْمُؤْمِنِيْنَ فَهَا اَنَا ذَا مُحَمَّدٌ صَلَّى اللهُ عَلَيْهِ وَسَلَّمَ وَاَمِيْرُ الْمُؤْمِنِيْنَ۔" (بحار الانوار جلد 13 صفحہ 202)

ಅನುವಾದ: ಎಂದರೆ ಇಮಾಮ್ ಮಹದಿಯರು ಹೇಳುವರು, ಓ ಜನರೇ! ನಿಮ್ಮ ಪೈಕಿ ಯಾರಾದರೂ ಇಬ್ರಾಹಿಂ, ಇಸ್ಮಾಯಿಲ್ ರವರನ್ನು ನೊಡಬಯಸುವವರಿದ್ದರೆ ಆಲಿಸಿರಿ! ನಾನೇ ಇಬ್ರಾಹಿಂ ಇಸ್ಮಾಯಿಲ್ ಆಗಿರುತ್ತೇನೆ. ನಿಮ್ಮ ಪೈಕಿ ಯಾರಾದರೂ ಮೂಸಾ, ಯಾಶ(ಅ) ಅವರನ್ನು ನೋಡಬಯಸುವವರಿದ್ದರೆ, ಕೇಳಿರಿ, ನಾನೇ ಆ ಮೂಸಾ ಮತ್ತು ಯಾಶ ಆಗಿದ್ದೇನೆ. ನಿಮ್ಮ ಪೈಕಿ ಯಾರಾದರೂ ಈಸಾ ಮತ್ತು ಶಮಊನ್‌ರವನ್ನು ನೋಡಬಯಸುವವರಿದ್ದರೆ, ಆಲಿಸಿರಿ, ಆ ಈಸಾ ಮತ್ತು ಶಮಊನ್ ನಾನಾಗಿದ್ದೇನೆ. ನಿಮ್ಮ ಪೈಕಿ ಯಾರಾದರೂ ಹಝ್ರತ್ ಮುಹಮ್ಮದ್(ಸ) ಮತ್ತು ಅಮೀರುಲ್ ಮುಮಿನೀನ್ ಹಝ್ರತ್ ಅಲಿ(ರ) ಅವರುಗಳನ್ನು ನೋಡಬಯಸುವವರಿದ್ದರೆ, ಆಲಿಸಿರಿ, ಮುಹಮ್ಮದ್(ಸ) ಮತ್ತು ಅಮೀರುಲ್ ಮುಮಿನೀನ್ ನಾನೇ ಆಗಿದ್ದೇನೆ."

ಇನ್ನು ಮುನ್ಸಿಫ್ ಹೈದರಾಬಾದ್ ಪತ್ರಿಕೆಯ ಸಂಪಾದಕರಿಗೆ ಇಮಾಮ್ ಬಾಖಿರ್ (ರಹ) ರವರ ಸ್ಥಾನಮಾನಗಳ ಕುರಿತು ತಿಳಿಸಿಕೊಡುವುದು ಅನಿವಾರ್ಯವೆನಿಸುತ್ತದೆ ಅವರ ಹೆಸರು ಮುಹಮ್ಮದ್, ಪದನಾಮ ಅಬು ಜಾಫರ್ ಮತ್ತು ಉಪನಾಮ ಬಾಖರ್ ಎಂದಿತ್ತು. ಅವರು (ರಹ) ಇಮಾಮ್ ಝೈನುಲ್ ಆಬಿದೀನ್‌ರವರ ಹಿರಿಯ ಸುಪುತ್ರರಾಗಿದ್ದರು. ಹಝ್ರತ್ ಇಮಾಮ್ ಹುಸೇನ್(ರ) ರವರ ಮೊಮ್ಮಗ ಮತ್ತು ದೇವನ ಹುಲಿ ಹಝುರತ್ ಅಲಿ(ರ) ಮತ್ತು ಸ್ವರ್ಗದಲ್ಲಿರುವ ಮಹಿಳೆಯರ ಸರದಾರ ಹಝುರತ್ ಫಾತಿಮಾ(ರ) ರವರ ಮರಿಮಕ್ಕಳಾಗಿದ್ದರು. ಅವರ(ರ) ತಾಯಿ ಪ್ರವಾದಿ(ಸ) ರವರ ಮೊಮ್ಮಗ ಎಂದರೆ ಹಝ್ರತ್ ಅಲಿ ಫಾತಿಮಾರ ಹಿರಿಯ ಪುತ್ರ ಇಮಾಮ್ ಹಸನ್‌ರ ಪುತ್ರಿಯಾಗಿದ್ದರು. ಅವರು ತನ್ನ ಜ್ಞಾನ ಆಧ್ಯಾತ್ಮಿಕ ಅನುಗ್ರಹ ಕಾರಣಗಳಿಂದ ಬಾಖರ್ ಎಂಬ ಬಿರುದಿನಿಂದ ಪ್ರಸಿದ್ಧರಾದರು. ಅಂದಹಾಗೆ ಇಮಾಮ್ ಬಾಖರ್(ರಹ) ರವರು ಸಾಮಾನ್ಯ ಮನುಷ್ಯರಾಗಿರಲಿಲ್ಲ ಬದಲಿಗೆ ಅವರ ತಂದೆ ಹಾಗೂ ತಾಯಿಯ ವಂಶ ಪ್ರವಾದಿ(ಸ) ರವರ ವಂಶಕ್ಕೆ ಸೇರಿದ್ದಾಗಿತ್ತು.

ಈಗ ಮುನ್ಸಿಫ್ ಪತ್ರಿಕೆಯ ಸಂಪಾದಕರೆ ಹೇಳಬೇಕು. ಇಮಾಮ್ ಮಹದಿ ಅವರ ಹೇಳಿಕೆ–ಯಾರು ಮುಹಮ್ಮದ್(ಸ) ರವರನ್ನು ನೋಡಬಯಸುವರೋ ಅವರು ನನ್ನನ್ನು ನೋಡಿಕೊಳ್ಳಲಿ ಎಂಬ ಮಾತು ಸ್ವತಃ ಮುಹಮ್ಮದರನ್ನೇ ಹೇಳಿದಂತಾಯಿತೇ ಅಥವಾ ಮುಹಮ್ಮದರ ಸಾದೃಶ್ಯ ರೂಪ? ಸ್ವಂತ ವ್ಯಕ್ತಿ ಅಂತೂ ಆಗಲಾರರು. ನಿಶ್ಚಿತವಾಗಿಯೂ ಸಾದೃಶ್ಯರೇ ಆಗುತ್ತಾರೆ. ಅಂದಹಾಗೆ ಮುಹಮ್ಮದರ ಸಾದೃಶ್ಯ ರೂಪದ ನಿಮ್ಮ ಆಕ್ಷೇಪಣೆಯನ್ನು ಈ ಮೂಲಕ ನಾವು ತಿಳಿಸಿ ಹೇಳಿದಂತಾಯಿತು.

ಕೆಲವು ಇನ್ನಷ್ಟು ಉದಾಹರಣೆಗಳಿವೆ. ಅದನ್ನು ನಾವು ನಿಮ್ಮ ಸೇವೆಯಲ್ಲಿ ಪ್ರಸ್ತುತಪಡಿಸುತ್ತೇವೆ. ಗಮನಿಸಿರಿ:

ದೇವಜ್ಞಾನಿ, ದೇವಪ್ರಿಯರು ಸಯ್ಯದ್ ಅಬ್ದುಲ್ ಕರೀಮ್ ಜೀಲಾನಿ(ರಹ್) (767ಹಿ–837ಹಿ) ಹೇಳುತ್ತಾರೆ:

ಈ (ಇನಾಮ್ ಮಹದಿ) ಎಂದರೆ ತಾತ್ಪರ್ಯ ಮುಹಮ್ಮದಿ ಸ್ಥಾನಮಾನಕ್ಕೆ ಅರ್ಹ ವ್ಯಕ್ತಿಯಾಗಿದ್ದಾನೆ ಮತ್ತು ಅವನ ಎಲ್ಲ ಸಾಧನೆಗಳು ಸಮಾನ ಸ್ಥಾನ ಹೊಂದಿರುತ್ತವೆ. (ಇನ್ಸಾನ್ ಕಾಮಿಲ್ ಉರ್ದು ಅಧ್ಯಾಯ 61, ಮಹದಿಯ ವಿವರಣೆ, ಪುಟ–375, ನಫೀಸ್ ಅಕಾಡಮಿ ಕರಾಚಿ)

ಹಝ್ರತ್ ಮುಲ್ಲ ಅಬ್ದುರ್ ರಹ್ಮಾನ್ ಜಾಮಿ (817 ಹಿ–898 ಹಿ)ಹೇಳುತ್ತಾರೆ:

"ಹಝ್ರತ್ ರಸೂಲುಲ್ಲಾಹ್(ಸ) ರವರ ಪವಿತ್ರ ಅಂತರಂಗವೇ ಮುಹಮ್ಮದರ ವಂಶಿಯ ಅನುಗ್ರಹದ ವೈಶಿಷ್ಟ್ಯವಾಗಿದೆ ಮತ್ತು ಅದುವೇ

*(ಪುಟ ಸಂಖ್ಯೆ–10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಯುದ್ಧದ ಸ್ಥಿತಿಗಳು ಯಾವ ವೇಗದಿಂದ ತೀವ್ರಗೊಳ್ಳುತ್ತಿದೆಯೋ ಮತ್ತು ಇಸ್ರೇಲ್ ಸರ್ಕಾರ ಹಾಗೂ ದೊಡ್ಡ ಶಕ್ತಿಶಾಲಿ ರಾಷ್ಟ್ರಗಳು ಯಾವ ಕಾರ್ಯನೀತಿಯನ್ನು ಪಾಲಿಸುತ್ತಿವೆಯೋ ಅದರಿಂದ ಈಗ ಜಾಗತಿಕ ಯುದ್ಧ ನಡೆಯಬಹುದೆಂದು ತೋರುತ್ತಿದೆ.

ಹಝ್ರತ್ ಪೈಗಂಬರ್(ಸ) ಅರ್ಧರಾತ್ರಿ ಸಮಯದಲ್ಲಿ ಎದ್ದು ಹೊರಡುವುದು ಮತ್ತು ತಹಜ್ಜುದ್ ನಿರ್ವಹಿಸಲು ತನ್ನ ಪುತ್ರಿ ಮತ್ತು ಅಳಿಯನನ್ನು ಉಪದೇಶಿಸುವುದು ಸಾಬೀತು ಪಡಿಸುವುದೇನೆಂದರೆ, ಯಾವ ಅಧ್ಯಾಪನೆಯ ಮೇಲೆ ಜನರನ್ನು ನಡೆಸಲು ಹಝ್ರತ್ ಪೈಗಂಬರ್(ಸ) ಬಯಸುತ್ತಿದ್ದರೋ ಅದರ ಮೇಲೆ ಅವರಿಗೆ ಪರಿಪೂರ್ಣ ವಿಶ್ವಾಸವಿತ್ತು ಎಂದಾಗಿದೆ.

ಹಝ್ರತ್ ಪೈಗಂಬರ್(ಸ) ಪ್ರತಿಯೊಂದು ಮಾತನ್ನು ತಾಳ್ಮೆಯಿಂದ ಮನವರಿಕೆ ಮಾಡಿಸುತ್ತಿದ್ದರು. ತರ್ಕಿಸುವುದಕ್ಕೆ ಬದಲಾಗಿ ಬಹಳ ಪ್ರೀತಿಯಿಂದ ತಪ್ಪನ್ನು ತಿಳಿಸಿಕೊಡುತ್ತಿದ್ದರು.

ರಾತ್ರಿ ಸಮಯದಲ್ಲಿ ಮಾಡುವ ದುಆಗಳೇ ಅಲ್ಲಾಹನ ಅನುಗ್ರಹವನ್ನು ಸೆಳೆಯುವಂತದ್ದಾಗಿರುತ್ತವೆ. ಇಂದಿನ ಕಾಲದಲ್ಲಿ ಲೋಕವನ್ನು ನಾಶದಿಂದ ರಕ್ಷಿಸಲು ಇವುಗಳ ಬಹಳ ಅಗತ್ಯವಿದೆ.

ಯಹೂದಿಗಳಲ್ಲಿ ಮೊತ್ತಮೊದಲು ಒಪ್ಪಂದದ ಉಲ್ಲಂಘನೆ ಮಾಡಿದ್ದು ಬನೂಖೈನ್‌ಖಾಅ್ ಗೋತ್ರವಾಗಿತ್ತು.

ಹಝ್ರತ್ ಪೈಗಂಬರ್(ಸ) ಬನೂ ಖೈನ್‌ಖಾಅ್‌ದವರಿಗೆ ಮನವರಿಕೆ ಮಾಡಿಸಲು ಬಹಳ ಪ್ರಯತ್ನ ಮಾಡಿದರು. ಆದರೆ ಅವರು ಮನವರಿಕೆ ಮಾಡುವುದಕ್ಕೆ ಬದಲಾಗಿ ಮುಸ್ಲಿಮರಿಗೆ ಬಹಿರಂಗವಾಗಿ ಬೆದರಿಕೆ ಹಾಕಲು ಆರಂಭಿಸಿದರು.

ಅಹ್ಮದಿಯರು ದುಆಗಳ ಕಡೆಗೆ ವಿಶೇಷವಾಗಿ ಗಮನಹರಿಸಬೇಕು. ಆರಾಮದಿಂದ ಇರಬೇಡಿರಿ. ಪ್ರತಿ ನಮಾಝಿನಲ್ಲಿ ಒಂದು ಸಜ್‌ದ ಅಥವಾ ಕನಿಷ್ಠ ಪಕ್ಷ ದಿನದ ಒಂದು ನಮಾಝಿನಲ್ಲಿ ಒಂದು ಸಜ್‌ದ ಖಂಡಿತವಾಗಿಯೂ ಇದಕ್ಕಾಗಿ ಮಾಡಬೇಕು. ಅದರಲ್ಲಿ ದುಆ ಮಾಡಬೇಕು.

ಈ ಯುದ್ಧದ ವಲಯ ವಿಸ್ತಾರವಾಗುತ್ತಿರುವುದಾಗಿ ತೋರುತ್ತಿದೆಯೆಂದೂ ಬೇಗನೇ ಯುದ್ಧವನ್ನು ಕೊನೆಗೊಳಿಸಲು ಕಾರ್ಯನೀತಿಯನ್ನು ಕೈಗೊಳ್ಳದಿದ್ದರೆ ಲೋಕವು ನಾಶವಾಗುವುದು ಎಂದೂ ಕೆಲವು ಇಸ್ಲಾಮಿಕ ದೇಶಗಳ ಅಧ್ಯಕ್ಷರು, ರಷ್ಯಾ, ಚೈನಾ ಮತ್ತು ಕೆಲವು ವಿಶ್ಲೇಷಕರು ಕೂಡ ಈಗಂತು ಬಹಿರಂಗವಾಗಿ ಹೇಳಲು ಮತ್ತು ಬರೆಯಲು ಶುರುಮಾಡಿರುವರು.

ದುಆದೊಂದಿಗೆ ತಮ್ಮ ಶಕ್ತ್ಯಾನುಸಾರ ಪ್ರಯತ್ನವನ್ನು ಸಹ ಮಾಡಬೇಕಾಗಿದೆ. ದೌರ್ಜನ್ಯಪೀಡಿತ ಮುಸ್ಲಿಮರಿಗಾಗಿ ದುಆ ಮಾಡಿರಿ. ಮುಸ್ಲಿಂ ಸರ್ಕಾರಗಳ ಕಡೆಯಿಂದ ಒಂದು ಸಂಯುಕ್ತ ಹಾಗೂ ದೀರ್ಘಕಾಲೀನ ಯೋಜನೆ ಉಂಟಾಗಲಿಕ್ಕಾಗಿಯೂ ದುಆ ಮಾಡಿರಿ.

**ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಜೀವನ ಚರಿತ್ರೆಯ ಕೆಲವು ಅಂಶಗಳ ಪ್ರಸ್ತಾವನೆ, ಖೈನ್‌ಖಾಅ್ ಯುದ್ಧದ ವಿವರಗಳು ಹಾಗೂ ಇಸ್ರಾಈಲ್ ಹಮಾಸ್ ಯುದ್ಧದ ನಿಮಿತ್ತ ದುಆವಿನ ಮನವಿ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **27–10–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ - بِسْمِ اللهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಯ ಪ್ರಸ್ತಾಪ ನಡೆಯುತ್ತಿತ್ತು. ಹಝ್ರತ್ ಪೈಗಂಬರ್(ಸ) ತನ್ನ ಪುತ್ರಿ ಮತ್ತು ಅಳಿಯನಿಗೆ ತಹಜ್ಜುದ್ ನಮಾಝ್ ನಿರ್ವಹಿಸಲು ಗಮನಸೆಳೆದ ಬಗ್ಗೆ ಬುಖಾರಿಯಲ್ಲಿ ಈ ರೀತಿ ವರದಿ ಇದೆ. ಹಝ್ರತ್ ಅಲಿ ಬಿನ್ ಅಬು ತಾಲಿಬ್(ರ) ವರದಿ ಮಾಡುತ್ತಾರೆ: ಒಂದು ದಿನ ಹಝ್ರತ್ ಪೈಗಂಬರ್(ಸ) ನನ್ನ ಮತ್ತು ಹಝ್ರತ್ ಫಾತಿಮ(ರ)ರ ಮನಗೆ ಬಂದು ಹೀಗೆ ಕೇಳಿದರು: ನೀವು ತಹಜ್ಜುದ್ ನಮಾಝ್ ನಿರ್ವಹಿಸುವುದಿಲ್ಲವೇ? ನಾನು ಹೀಗೆ ಉತ್ತರಿಸಿದೆ: ನಮ್ಮ ಜೀವ ಅಲ್ಲಾಹನ ಕೈಯಲ್ಲಿದೆ. ಅವನು ಇಚ್ಛಿಸುವಾಗ ನಮ್ಮನ್ನು ನಿದ್ದೆಯಿಂದ ಎಬ್ಬಿಸುತ್ತಾನೆ. ನಮಾಝ್ ತಹಜ್ಜುದ್ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆ. ಹಝ್ರತ್ ಅಪಿ(ರ) ಹೇಳುತ್ತಾರೆ: ಇದನ್ನು ಆಲಿಸಿ ಹಝ್ರತ್ ಪೈಗಂಬರ್(ಸ) ಏನೂ ಹೇಳದೇ ಮರಳಿ ಹೋದರು. ಹೋಗುವಾಗ ಅವರು ಹೀಗೆ ಹೇಳುತ್ತಿದ್ದರು: **ವಕಾನಲ್ ಇನ್ಸಾನು ಅಕ್ಸರ ಶೈಯಿನ್ ಜದಲ** (ಅಲ್‌ಕಹಫ್: 55) ಮನುಷ್ಯನು ಬಹಳ ಜಗಳಗಂಟಿಯಾಗಿರುತ್ತಾನೆ. (ಸಹೀಹ್ ಬುಖಾರಿ, ಕಿತಾಬುತ್ತಹಜುದ್, ಹದೀಸ್–1127)

ಈ ಘಟನೆಯನ್ನು ಹಝ್ರತ್ ಮುಸಿಹ್ ಮೌಊದ್(ರ)ರವರು ವಿವರಾತ್ಮಕವಾಗಿ ಹೀಗೆ ವಿವರಿಸಿದ್ದಾರೆ: "ಒಮ್ಮೆ ರಾತ್ರಿ, ಹಝ್ರತ್ ಪೈಗಂಬರ್(ಸ) ತಮ್ಮ ಅಳಿಯ ಹಝ್ರತ್ ಅಲಿ(ರ) ಮತ್ತು ಅವರ ಪುತ್ರಿ ಹಝ್ರತ್ ಫಾತಿಮಾ(ರ) ಅವರ ಮನೆಗೆ ಹೋದರು. ಮತ್ತು ನೀವು ತಹಜ್ಜುದ್ ನಮಾಝ್ ನಿರ್ವಹಿಸುವುದಿಲ್ಲವೇ? (ಅಂದರೆ ಮಧ್ಯರಾತ್ರಿಯಲ್ಲಿ ಎದ್ದ ನಿರ್ವಹಿಸುವ ನಮಾಝ್) ಅದಕ್ಕ ಹಝ್ರತ್ ಅಲಿ(ರ) ಹೇಳಿದರು, ಯಾ ರಸೂಲಲ್ಲಾಹ್! ನಾವು ನಿರ್ವಹಿಸಲು ಪ್ರಯತ್ನಿಸುತ್ತೇವೆ, ಆದರೆ ಸರ್ವಶಕ್ತನಾದ ಅಲ್ಲಾಹನ ಇಚ್ಛಿಸಿದರೆ ನಮಗೆ ಎಬ್ಬಿಸುತ್ತಾನೆ ಇಲ್ಲದಿದ್ದರೆ ನಾವು ಮಲಗಿರುತ್ತೇವೆ ಹೀಗೆ ನಮ್ಮ ನಮಾಝ್ ತಹಜ್ಜುದ್ ಉಳಿದುಬಿಡುತ್ತದೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು "ತಹಜ್ಜುದ್ ನಮಾಜ್ ನಿರ್ವಹಿಸಿರಿ" ಎಂದು ಹೇಳಿ ತಮ್ಮ ಮನೆಯ ಕಡೆಗೆ ನಡೆದರು, ಹೋಗುವಾಗ ದಾರಿಯಲ್ಲಿ ಅವರು **ವಕಾನಲ್ ಇನ್ಸನ ಅಕ್ಸರ ಶೈಯಿನ್ ಜದಲ** (ಅಲ್–ಕಹ್ಫ್: 55) ಎಂದು ಪದೇ ಪದೇ ಹೇಳುತ್ತಿದ್ದರು. ಇದು ಪವಿತ್ರ ಖುರ್‌ಆನ್‌ನ ಆಯತ್ ಆಗಿದೆ ಅದರ ಅರ್ಥ ಮನುಷ್ಯನು ಸಾಮಾನ್ಯವಾಗಿ ತನ್ನ ತಪ್ಪನ್ನು ಒಪ್ಪಿಕೊಳ್ಳಲು ಭಯಭೀತನಾಗುತ್ತಾನೆ ಮತ್ತು ವಿವಿಧ ರೀತಿಯಲ್ಲಿ ವಾದಿಸಿ ತನ್ನ ತಪ್ಪನ್ನು ಮರೆಮಾಡುತ್ತಾನೆ. ಹಝ್ರತ್ ಅಲಿ(ರ) ಮತ್ತು ಹಝ್ರತ್ ಫಾತಿಮಾ(ರ) ಅವರು ಕೆಲವೊಮ್ಮೆ ನಾವು ತಪ್ಪು ಮಾಡುತ್ತೇವೆ ಎಂದು ಹೇಳುವ ಬದಲು ಅವರು ಏಕೆ ಹೀಗೆ ಹೇಳಿದರು, ಸರ್ವಶಕ್ತನಾದ ಅಲ್ಲಾಹನು ಇಚ್ಛಿಸುವಾಗ ನಮ್ಮನ್ನು ನಿದ್ದೆಯಿಂದ ಎಬ್ಬಿಸುತ್ತಾನೆ ಎಂದು ಹೇಳಿದರು ಮತ್ತು ತಮ್ಮ ತಪ್ಪನ್ನು ಅಲ್ಲಾಹನ ಕಡೆ ಏಕೆ ಆರೋಪಿಸಿದರು? ಎಂದರ್ಥ.
(ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–389–390)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ಇನ್ನು ವಿವರವಾಗಿ ಬಗ್ಗೆ ಹೀಗೆ ಪ್ರಸ್ತಾಪಿರುವರು: ಒಂದು ಸಂದರ್ಭದಲ್ಲಿ ಹಝ್ರತ್ ಅಲಿ(ರ) ಹಝ್ರತ್ ಪೈಗಂಬರ್(ಸ)ರಿಗೆ ನೀಡಿದ ಉತ್ತರದಲ್ಲಿ ವಿವಾದದ ಒಂದು ಶೈಲಿ ಕಂಡುಬರುತ್ತಿತ್ತು. ಈ ಉತ್ತರದಿಂದ ಹಝ್ರತ್ ಪೈಗಂಬರ್(ಸ) ಕೋಪ ಮತ್ತು ನಿರಾಸೆಗೊಳ್ಳುವುದಕ್ಕೆ ಬದಲಾಗಿ ಅವರು ಎಂತಹ ಸೂಕ್ಷ್ಮವಾದ ಶೈಲಿಯನ್ನು ಕೈಗೊಂಡರು ಎಂದರೆ, ಬಹುಶಃ ಹಝ್ರತ್ ಅಲಿ(ರ) ತನ್ನ ಜೀವಿತದ ಕೊನೆಯ ತನಕ ಅದರ ಮಾಧುರ್ಯವನ್ನು ಸವಿದಿರಬಹುದು. ಅದರಿಂದ ಅವರು ಅನುಭವಿಸಿದ ಆನಂದ ಅವರದ್ದೇ ಹಕ್ಕಾಗಿದೆ. ಹಝ್ರತ್ ಪೈಗಂಬರ್(ಸ) ತನ್ನ ಅನಿಷ್ಟತೆಯನ್ನು ತೋರಿಸಿದ ಆ ಘಟನೆಯನ್ನು ಮನವರಿಕೆ ಮಾಡುವಾಗ ಸೂಕ್ಷ್ಮವಾಗಿ ನೋಡುವ ಪ್ರತಿಯೊಬ್ಬರಿಗೂ ಆಶ್ಚರ್ಯವಾಗುತ್ತದೆ. ಹಝ್ರತ್ ಅಲಿ ಬಿನ್ ಅಬು ತಾಲಿಬ್(ರ) ವರದಿ ಮಾಡುತ್ತಾರೆ: ಒಂದು ದಿನ ಹಝ್ರತ್ ಪೈಗಂಬರ್(ಸ) ನನ್ನ ಮತ್ತು ಹಝ್ರತ್ ಫಾತಿಮ(ರ)ರ ಮನಗೆ ಬಂದು ಹೀಗೆ ಕೇಳಿದರು: ನೀವು ತಹಜ್ಜುದ್ ನಮಾಝ್ ನಿರ್ವಹಿಸುವುದಿಲ್ಲವೇ? ನಾನು ಹೀಗೆ ಉತ್ತರಿಸಿದೆ: ನಮ್ಮ ಜೀವ ಅಲ್ಲಾಹನ ಕೈಯಲ್ಲಿದೆ. ಅವನು ಇಚ್ಛಿಸುವಾಗ ನಮ್ಮನ್ನು ನಿದ್ದೆಯಿಂದ ಎಬ್ಬಿಸುತ್ತಾನೆ. ನಮಾಝ್ ತಹಜ್ಜುದ್ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆ. ಹಝ್ರತ್ ಅಲಿ(ರ) ಹೇಳುತ್ತಾರೆ: ಇದನ್ನು ಆಲಿಸಿ ಹಝ್ರತ್ ಪೈಗಂಬರ್(ಸ) ಏನೂ ಹೇಳದೇ ಮರಳಿ ಹೋದರು. ಹೋಗುವಾಗ ಅವರು ಹೀಗೆ ಹೇಳುತ್ತಿದ್ದರು: **ವಕಾನಲ್ ಇನ್ಸಾನು ಅಕ್ಸರ ಶೈಯಿನ್ ಜದಲ** (ಅಲ್‌ಕಹಫ್: 55) ಮನುಷ್ಯನು ಬಹಳ ಜಗಳಗಂಟಿಯಾಗಿರುತ್ತಾನೆ.

ಅಲ್ಲಾಹ್! ಅಲ್ಲಾಹ್! ನೀವು ಈ ಉತ್ತರವನ್ನು ನೀಡಬಾರದಿತ್ತು ಎಂದು ಹಝ್ರತ್ ಅಲಿ(ರ) ಅವರಿಗೆ ಎಷ್ಟು ಸೂಕ್ಷ್ಮವಾಗಿ ವಿವರಿಸಿದ್ದರೆ. ಬೇರೆ ಯಾರಾದ್ರೂ ಇದ್ದಿದ್ದರೆ ಮೊದಲು ನನ್ನ ಸ್ಥಾನಮಾನ ನೋಡು, ಆಮೇಲೆ ನಿನ್ನ ಉತ್ತರ ನೋಡು ನನ್ನ ಮಾತನ್ನು ತಿರಸ್ಕರಿಸುವ ಹಕ್ಕು ನಿನಗಿದೆಯೇ ಎಂದು ವಿವಾದಕ್ಕೆ ಇಳಿಯುತ್ತಿದ್ದನು. ಇಲ್ಲದಿದ್ದರೆ, ಕನಿಷ್ಟಪಕ್ಷ ಮನುಷ್ಯನು ದುರ್ಬಲನಾಗಿದ್ದಾನೆ ಮತ್ತು ಎಲ್ಲಾ ಕಾರ್ಯಗಳ ನಿಯಂತ್ರಣವು ಅಲ್ಲಾಹನ ಕೈಯಲ್ಲಿದೆ ಎಂಬ ನಿಮ್ಮ ವಾದವು ತಪ್ಪಾಗಿದೆ ಎಂದು ವಾದಿಸುತ್ತಿದ್ದನು. ಅಲ್ಲಾಹನು ನಮಾಝ್‌ಗೆ ಅವಕಾಶ ನೀಡಲಿ ಅಥವಾ ಬಿಡಲಿ ಅವನು ಬಯಸಿದ ರೀತಿಯಲ್ಲಿ ಮಾಡುತ್ತಾನೆ ಮತ್ತು ಬಲವಂತದ ವಿಷಯವು ಪವಿತ್ರ ಖುರ್‌ಆನ್‌ನ ಬೋಧನೆಗಳಿಗೆ ವಿರುದ್ಧವಾಗಿದೆ ಎಂದು ಅವರು ಹೇಳುತ್ತಾರೆ." ಹಝ್ರತ್ ಪೈಗಂಬರ್(ಸ) ಅವರು ಹೀಗೆ ಇವೆಲ್ಲವು ಹೇಳಬಹುದಾಗಿತ್ತು "ಆದರೆ ಅವರು(ಸ) ಆ ಎರಡೂ ವಿಧಾನಗಳನ್ನು ಸ್ವೀಕರಿಸಲಿಲ್ಲ ಮತ್ತು ಅವರ ಮೇಲೆ ಕೋಪಗೊಳ್ಳಲಿಲ್ಲ ಅಥವಾ ಅವರು ಹಝ್ರತ್ ಅಲಿ(ರ) ಅವರಿಗೆ ಅವರ ಮಾತು ತಪ್ಪಾಗಿದೆ ಎಂದು ತಿಳಿಸಲಿಲ್ಲ. ಬದಲಿಗೆ ಅವರ ಆ ಉತ್ತರಕ್ಕೆ ಮನುಷ್ಯರು ಸಹ ವಿಚಿತ್ರವಾದ ರೀತಿಯಲ್ಲಿ ತನಗೆ ಬೇಕಾದ ರೀತಿಯಲ್ಲಿ ಪಡೆದುಕೊಳ್ಳುತ್ತಾನೆ ಎಂದು ಆಶ್ಚರ್ಯವನ್ನು ವ್ಯಕ್ತಪಡಿಸಿದರು. ವಾಸ್ತವವಾಗಿ, ಹಝ್ರತ್ ಅಲಿ(ರ)ರ ಮಾತಿಗೆ ಉತ್ತರವಾಗಿ ಹಝ್ರತ್ ಪೈಗಂಬರ್(ಸ) ಇಷ್ಟು ಮಾತ್ರ ಹೇಳಿದ್ದು ಎಷ್ಟು ಉಪಯುಕ್ತವಾಗಿತ್ತು ಎಂದರೆ, ಅದರ ಹತ್ತರಲ್ಲಿ ಒಂದು ಅಂಶ ಪ್ರಯೋಜನ ಕೂಡ ನೂರಾರು ಸಂವಾದಗಳಿಂದಲೂ ಲಭಿಸಲು ಸಾಧ್ಯವಲ್ಲ. ಈ ಹದೀಸಿನಿಂದ ನಮಗೆ ಅನೇಕ ಸಂಗತಿಗಳು ಗೊತ್ತಾಗುತ್ತದೆ. ಇದು ಹಝ್ರತ್ ಪೈಗಂಬರ್(ಸ)ರ ನೈತಿಕಗುಣಗಳ ವಿವಿಧ ಮಗ್ಗುಲುಗಳ ಮೇಲೆ ಬೆಳಕು ಬೀರುತ್ತದೆ. ಅದರ ಪ್ರಸ್ತಾಪವನ್ನು ಇಲ್ಲೇ ಮಾಡುವುದು ಅನುಯೋಜ್ಯವೆಂದು ತೋರುತ್ತಿದೆ. ಮೊದಲನೆಯದಾಗಿ, ಹಝ್ರತ್ ಪೈಗಂಬರ್(ಸ) ಧಾರ್ಮಿಕತೆಯ ಬಗ್ಗೆ ಎಷ್ಟು ಕಾಳಜಿ ವಹಿಸುತ್ತಿದ್ದರು ಎಂದು ಅಂದಾಜಾಗುತ್ತದೆ. ರಾತ್ರಿ ಸಮಯದಲ್ಲಿ ಮನೆಯಿಂದ ಹೊರಟು ನಿಕಟರ ಬಗ್ಗೆ ಕಾಳಜಿ ವಹಿಸುತ್ತಿದ್ದರು.

ಅನೇಕ ಜನರು ಸ್ವತಃ ಒಳ್ಳೆಯರಾಗಿರುತ್ತಾರೆ ಮತ್ತು ಜನರಿಗೂ ಸತ್ಕರ್ಮಗಳ ಬಗ್ಗೆ ಉಪದೇಶ ನೀಡುತ್ತಾರೆ. ಆದರೆ ಅವರ ಮನೆಯ ಸ್ಥಿತಿ ಬಹಳ ಕೆಟ್ಟದ್ದಾಗಿರುತ್ತದೆ. ಸಂಬಂಧಿಕರ ತರಬೇತಿ ಮಾಡುವುದು ಎಂತಹ ಉನ್ನತ ಮಟ್ಟದ ನಿಪುಣತೆ ಆಗಿದೆ ಎಂದರೆ, ಹಝ್ರತ್ ಪೈಗಂಬರ್(ಸ)ರಲ್ಲಿ ಇದು ಇರದೇ ಹೋಗಿದ್ದರೆ ಪೈಗಂಬರ್(ಸ)ರ ಸ್ವಭಾವಗುಣಗಳಲ್ಲಿ ಒಂದು ಅಮೂಲ್ಯ ಸಂಗತಿಯು ಕೊರತೆ ಇರಬಹುದಾಗಿತ್ತು. ಆದರೆ ಹಝ್ರತ್ ಪೈಗಂಬರ್(ಸ) ಉನ್ನತ ನೈತಿಕಗುಣಗಳನ್ನು ಹೊಂದಿದವರಾಗಿದ್ದ ಕಾರಣದಿಂದ ಈ ನೈಪುಣ್ಯ ಕೂಡ ಅವರಲ್ಲಿ ಬಹಳವಿತ್ತು.

"ಎರಡನೆಯ ವಿಷಯವೆಂದರೆ ಅವರು ಜಗತ್ತಿಗೆ ಪ್ರಸ್ತುತಪಡಿಸುವ ಬೋಧನೆಯಲ್ಲಿ ಸಂಪೂರ್ಣ ನಂಬಿಕೆಯನ್ನು ಹೊಂದಿದ್ದರು ಮತ್ತು ಅವರು ಒಂದು ನಿಮಿಷವೂ ಅದನ್ನು ಅನುಮಾನಿಸಲಿಲ್ಲ ಮತ್ತು ಜನರು ಆಕ್ಷೇಪಿಸುವಂತೆ ನೌಧುಬಿಲ್ಲಾಹ್ ಜಗತ್ತನ್ನು ಗೂಬೆಯನ್ನಾಗಿ ಮಾಡುತ್ತಾರೆ ಮತ್ತು ಹಝ್ರತ್ ಪೈಗಂಬರ್(ಸ) ತನ್ನ ಸರ್ಕಾರವನ್ನು ಸ್ಥಾಪಿಸಲು ಈ ಎಲ್ಲಾ ಕಾರ್ಖಾನೆಗಳನ್ನು ನಿರ್ಮಿಸಿದರು. "ಇದನ್ನು ಇಸ್ಲಾಂನ ವಿರೋಧಿಗಳು ವಿರೋಧಿಸುತ್ತಾರೆ. "ಇಲ್ಲದಿದ್ದರೆ, ಅವರಿಗೆ(ಸ) ಯಾವುದೇ ವಹೀ ಆಗುವುದಿಲ್ಲ." ಹೀಗೆ ಅನೇಕ ಪಾಶ್ಚಿಮಾತ್ಯ ಬರಹಗಾರರು ಹೀಗೆ ಬರೆದಿದ್ದಾರೆ ಮತ್ತು ಅಂದಿನ ಅವಿಶ್ವಾಸಿಗಳು ಸಹ ಹಾಗೆಯೇ ಹೇಳುತ್ತಿದ್ದರು. "ಇದು ವಿಷಯವಲ್ಲ, ಬದಲಿಗೆ ಹಝ್ರತ್ ಪೈಗಂಬರ್(ಸ) ಅವರಿಗೆ ತಾವು ಅಲ್ಲಾಹನ ಕಡೆಯಿಂದ ಸಂದೇಶವಾಹಕರಾಗಿದ್ದಾರೆ ಎಂದು ಎಂತಹ ದೃಢನಂಬಿಕೆ ಹೊಂದಿದ್ದರು ಎಂದರೆ "ಅದರ ಪೂರ್ವನಿದರ್ಶನವು ಜಗತ್ತಿನಲ್ಲಿ ಕಂಡುಬರುವುದಿಲ್ಲ, ಏಕೆಂದರೆ ಅವರು ರಚನೆಯೊಂದಿಗೆ ಕೆಲಸ ಮಾಡುವ ಮೂಲಕ ತಮ್ಮ ಸತ್ಯಾಂಶವನ್ನು ಸಾಬೀತು ಪಡಿಸಲು ಜನರ ನಡುವೆ ವರ್ತಿಸುವ ಸಾಧ್ಯತೆ ಇರಬಹುದು ಆದರೆ ಹಝ್ರತ್ ಪೈಗಂಬರ್(ಸ) ಅರ್ಧರಾತ್ರಿ ಸಮಯದಲ್ಲಿ ಎದ್ದು ಹೊರಡುವುದು ಮತ್ತು ತಹಜ್ಜುದ್ ನಿರ್ವಹಿಸಲು ತನ್ನ ಪುತ್ರಿ ಮತ್ತು ಅಳಿಯನನ್ನು ಉಪದೇಶಿಸುವುದು ಸಾಬೀತು ಪಡಿಸುವುದೇನೆಂದರೆ, ಯಾವ ಅಧ್ಯಾಪನೆಯ ಮೇಲೆ ಜನರನ್ನು ನಡೆಸಲು ಹಝ್ರತ್ ಪೈಗಂಬರ್(ಸ) ಬಯಸುತ್ತಿದ್ದರೋ ಅದರ ಮೇಲೆ ಅವರಿಗೆ ಪರಿಪೂರ್ಣ ವಿಶ್ವಾಸವಿತ್ತು ಎಂದಾಗಿದೆ. ಒಂದು ಅಧ್ಯಾಪನೆಯ ಪ್ರಕಾರ ನಡೆಯುವುದು ಮತ್ತು ನಡೆಯದೇ ಇರುವುದು ಸಮವೆಂದು ಭಾವಿಸುವ ಒಬ್ಬ ಕಪಟವಾದಿ ತನ್ನ ಮಕ್ಕಳನ್ನು ಇಂತಹ ರಹಸ್ಯವಾದ ಸಮಯದಲ್ಲಿ ತಾನು ತಂದ ಅಧ್ಯಾಪನೆಯ ಪ್ರಕಾರ ನಡೆಯುವಂತೆ ಉಪದೇಶಿಸಲು ಸಾಧ್ಯವಲ್ಲ. ಈ ಶಿಕ್ಷಣವನ್ನು ಅನುಸರಿಸದೆ ಪರಿಪೂರ್ಣತೆಯನ್ನು ಸಾಧಿಸಲು ಸಾಧ್ಯವಿಲ್ಲ ಎಂದು ಮನುಷ್ಯನು ತನ್ನ ಹೃದಯದಲ್ಲಿ ನಂಬಿದಾಗ ಮಾತ್ರ ಇದು ಸಂಭವಿಸುತ್ತದೆ.

ಮೂರನೆಯ ಸಂಗತಿಯೆಂದರೆ, ಅದನ್ನು ಸಾಬೀತುಪಡಿಸಲಿಕ್ಕಾಗಿ ನಾನು ಈ ಘಟನೆಯನ್ನು ವಿವರಿಸುತ್ತಿರುವೆನು. ಅದೇನೆಂದರೆ, ಹಝ್ರತ್ ಪೈಗಂಬರ್(ಸ) ಪ್ರತಿಯೊಂದು ಮಾತನ್ನು ತಾಳ್ಮೆಯಿಂದ ಮನವರಿಕೆ ಮಾಡಿಸುತ್ತಿದ್ದರು. ತರ್ಕಿಸುವುದಕ್ಕೆ ಬದಲಾಗಿ ಬಹಳ ಪ್ರೀತಿಯಿಂದ ತಪ್ಪನ್ನು ತಿಳಿಸಿಕೊಡುತ್ತಿದ್ದರು.

ಹೀಗಾಗಿ, ಈ ಸಂದರ್ಭದಲ್ಲಿ, ಹಝ್ರತ್ ಅಲಿ(ರ) ಅವರು ಹಝ್ರತ್ ಪೈಗಂಬರ್(ಸ) ಅವರ ಪ್ರಶ್ನೆಯನ್ನು ಈ ರೀತಿ ತಿರಸ್ಕರಿಸಲು ಬಯಸಿದಾಗ, ನಾವು ನಿದ್ದೆ ಮಾಡುವಾಗ ಎಚ್ಚರಗೊಳ್ಳಲು ನಮಗೆ ಅಧಿಕಾರ ಏನು, ಏಕೆಂದರೆ ಮಲಗುವ ವ್ಯಕ್ತಿಗೆ ತನ್ನ ಮೇಲೆ ನಿಯಂತ್ರಣವಿರುವುದಿಲ್ಲ. ಅವನು ನಿದ್ದೆ ಹೋದಾಗ ಈ ಸಮಯವಾಗಿದೆ ಅಥವಾ ಈಗ ಆತನು ಇಂತಹ ಕೆಲಸ ಮಾಡಬೇಕು ಎಂದು ಅವನಿಗೆ ಹೇಗೆ ತಿಳಿಯುತ್ತದೆ. ಅಲ್ಲಾಹನು ತನ್ನ ಕಣ್ಣುಗಳನ್ನು ತೆರೆದಾಗ ನಮಾಝ್ ನಿರ್ವಹಿಸಲಾಗುತ್ತಿತ್ತು ಇಲ್ಲದಿದ್ದರೆ ಅಸಹಾಯಕತೆ ಇರುತ್ತಿತ್ತು (ಏಕೆಂದರೆ ಆ ಕಾಲದಲ್ಲಿ ಅಲಾರಾಂ ಗಡಿಯಾರಗಳು ಇರಲಿಲ್ಲ) ಈ ಮಾತನ್ನು ಆಲಿಸಿದಾಗ ಹಝ್ರತ್ ಪೈಗಂಬರ್(ಸ) ಅವರಿಗೆ ಆಶ್ಚರ್ಯವಾಗಲೇ ಬೇಕಾಗಿತ್ತು ಏಕೆಂದರೆ ಅವರ(ಸ)ರ ಮನಸ್ಸಿನಲ್ಲಿದ್ದ ಈಮಾನ್‌ನ ಮಟ್ಟವು ಹೇಗಿತ್ತೆಂದರೆ ಅವರು ಹೀಗೆ ತಹಜ್ಜುದ್ ನಮಾಝ್‌ನ ಸಮಯ ಮರೆಮಾಚಲು ಸಾಧ್ಯವಿರಲಿಲ್ಲ. ಆದ್ದರಿಂದ ಅವರು ತಮ್ಮ ಮುಖವನ್ನು ಇನ್ನೊಂದು ಕಡೆಗೆ ತಿರುಗಿಸಿ ಮನುಷ್ಯ ಪಾಲಿಸುವುದಿಲ್ಲ ಬದಲಿಗೆ ಜಗಳ ಮಾಡುತ್ತಾನೆ ಎಂದು ಮಾತ್ರ ಹೇಳಿದರು. ಅಂದರೆ ನೀವು ಭವಿಷ್ಯದಲ್ಲಿ ಸಮಯವನ್ನು ವ್ಯರ್ಥ ಮಾಡದಿರಲು ಪ್ರಯತ್ನಿಸಬೇಕಾಗಿತ್ತು ಮತ್ತು ಈ ರೀತಿ ತಪ್ಪಿಸುವುದಲ್ಲ. ಹಝ್ರತ್ ಅಲಿ(ರ) ಹೇಳುತ್ತಾರೆ: ಅದರ ನಂತರ ನಾನು ಎಂದಿಗೂ ತಹಜ್ಜುದ್ ನಮಾಝನ್ನು ಬಿಟ್ಟಿಲ್ಲ. (ಸೀರತುನ್ನಬಿ(ಸ), ಅನ್ವಾರುಲ್ ಉಲೂಮ್, ಸಂಪುಟ-1, ಪಉಟ-588-590)

ಈ ಘಟನೆಯನ್ನು ನಾವು ತಹಜ್ಜುದ್ ನಮಾಝ್ ಅನುಷ್ಠಿಸುವುದಕ್ಕೆ ಸಂಬಂಧಿಸಿ ನೆನಪಿನಲ್ಲಿಡಬೇಕು. ವಿಶೇಷವಾಗಿ ಮುರಬ್ಬಿಗಳು, ವಖ್ಫೇ ಝಿಂದಗಿಗಳು ಮತ್ತು ಹುದ್ದೇದಾರರು ಈ ಬಗ್ಗೆ ಗಮನವಹಿಸಬೇಕು. ರಾತ್ರಿ ಸಮಯದಲ್ಲಿ ಮಾಡುವ ದುಆಗಳೇ ಅಲ್ಲಾಹನ ಅನುಗ್ರಹವನ್ನು ಸೆಳೆಯುವಂತದ್ದಾಗಿರುತ್ತವೆ. ಇಂದಿನ ಕಾಲದಲ್ಲಿ ಲೋಕವನ್ನು ನಾಶದಿಂದ ರಕ್ಷಿಸಲು ಇವುಗಳ ಬಹಳ ಅಗತ್ಯವಿದೆ.

ಅದರ ನಂತರದ ಘಟನೆಗಳಲ್ಲಿ ಬನೂ ಖೈನ್‌ಖಾಅ್‌ದ ಪ್ರಸ್ತಾಪ ಬರುತ್ತದೆ. ಈ ಯುದ್ಧ ಹಿಜರೀ ಎರಡರಲ್ಲಿ ನಡೆಯಿತು. ಹಝ್ರತ್ ಪೈಗಂಬರ್(ಸ) ಅವರು ಮದೀನಾಗೆ ಹಿಜ್ರತ್ ಮಾಡಿ ಹೋದ ನಂತರ, ಅರೇಬಿಯಾದ ಅವಿಶ್ವಾಸಿಗಳ ವಿಷಯ ಒಂದೇ ಆಗಿರಲಿಲ್ಲ ಎಂದು ಅವರ ಬಗ್ಗೆ ಬರೆಯಲಾಗಿದೆ. ಅವರು ಮೂರು ವರ್ಗಗಳಾಗಿ ವಿಂಗಡಿಸಲ್ಪಟ್ಟಿದ್ದರು. ಅವುದಳಲ್ಲಿ ಒಬ್ಬರು ಹಝ್ರತ್ ಪೈಗಂಬರ್(ಸ.ಅ) ರವರು ಅವರು(ಸ.ಅ) ಅವರೊಂದಿಗೆ ಯುದ್ಧ ಮಾಡಬಾರದು ಅಥವಾ ಅವರ ವಿರುದ್ಧ ಶತ್ರುಗಳಿಗೆ

ಸಹಾಯ ಮಾಡಬಾರದು ಎಂಬ ಷರತ್ತಿನ ಮೇಲೆ ಒಪ್ಪಂದ ಮಾಡಿಕೊಂಡಿದ್ದರು. ಈ ಒಪ್ಪಂದವನ್ನು ಮಾಡಿದ ಯಹೂದಿಗಳ ಮೂರು ಗೋತ್ರಗಳೆಂದರೆ ಬನು ಖುರೈಝಾ, ಬನು ನಝೀರ್ ಮತ್ತು ಬನು ಖೈನ್‌ಖಾಅ್ ಆಗಿದ್ದರು. ಇತರರು ಅಂದರೆ ಖುರೈಶಿಗಳು ಅವರು ರಸೂಲುಲ್ಲಾಹ್(ಸ) ಅವರನ್ನು ದ್ವೇಷಿಸುತ್ತಿದ್ದವರು ಮತ್ತು ಅವರ ವಿರುದ್ಧ ಹೋರಾಡಿದರು. ಮೂರನೆಯವರು ಹಝ್ರತ್ ಪೈಗಂಬರ್(ಸ.ಅ) ಅವರನ್ನು ತೊರೆದವರು. ಅವರು ಅರೇಬಿಯಾದ ಇತರ ಗೋತ್ರಗಳಂತೆ ಹಝ್ರತ್ ಪೈಗಂಬರ್(ಸ)ರ ಅಂತ್ಯಕ್ಕಾಗಿ ಕಾಯುತ್ತಿದ್ದರು. ಅವರ ಪರಿಸ್ಥಿತಿ ಹಾಗೆಯೇ ಇರಲಿಲ್ಲ. ಅವರಲ್ಲಿ ಕೆಲವರು ತಮ್ಮ ಮನಸ್ಸಿನಲ್ಲಿ ಬನು ಖುಝಾಅ ಗೋತ್ರದವರಂತೆ ಮುಸ್ಲಿಮರು ಪ್ರಾಬಲ್ಯ ಸಾಧಿಸಬೇಕೆಂದು ಬಯಸಿದ್ದರು. ಮತ್ತು ಕೆಲವರ ವಿಷಯವು ಬನುಬಕ್ಕರ್ ಜನರಂತೆ ವಿರುದ್ಧವಾಗಿತ್ತು. ಕೆಲವರು ಹೊರನೋಟಕ್ಕೆ ಮುಸಲ್ಮಾನರ ಜೊತೆಗಿದ್ದರೂ ಅಂತರಂಗದಲ್ಲಿ ಹಝ್ರತ್ ಪೈಗಂಬರ್(ಸ) ಅವರ ಶತ್ರುಗಳನ್ನು ಬೆಂಬಲಿಸುತ್ತಿದ್ದರು. ಇವರು ಕಪಟವಿಶ್ವಾಸಿಗಳಾಗಿದ್ದರು. ಹಝ್ರತ್ ಪೈಗಂಬರ್(ಸ) ಮದೀನಾಗೆ ಬಂದಾಗ, ಅವರು(ಸ) ಎಲ್ಲಾ ಯಹೂದಿಗಳೊಂದಿಗೆ ಒಪ್ಪಂದ ಮಾಡಿಕೊಂಡರು. ಅವರ(ಸ) ಹಾಗೂ ಅವರ ನಡುವೆ ಒಪ್ಪಂದವನ್ನು ಬರೆಯಲಾಯಿತು. ಪ್ರತಿಯೊಂದು ಸಮೂದಾಯವೂ ತನ್ನ ಮಿತ್ರಪಕ್ಷದೊಂದಿಗೆ ಸೇರಿಕೊಂಡಿತು. ಈಗ ಅವರು(ಸ) ತಮ್ಮ ಮತ್ತು ಅವರ ನಡುವೆ ಒಂದು ಶಾಂತಿ ಸಂಧಾನದ ಪತ್ರವನ್ನು ಬರೆದರು. ಅವರಿಗೆ ಹಲವು ಷರತ್ತುಗಳನ್ನು ವಿಧಿಸಲಾಗಿತ್ತು. ಅದರಲ್ಲಿ ಒಂದು ಷರತ್ತು ಏನಾಗಿತ್ತು ಎಂದರೆ ಅವರು ಹಝ್ರತ್ ಪೈಗಂಬರ್(ಸ) ಅವರ ವಿರುದ್ಧ ಯಾವುದೇ ಶತ್ರುಗಳನ್ನು ಬೆಂಬಲಿಸುವುದಿಲ್ಲ. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ-4, ಪುಟ-179, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) ಇದು ಒಪ್ಪಂದವಾಗಿತ್ತು. ಈಗ, ಬನೂ ಖೈನ್‌ಖಾಅ್‌ನ ದ್ರೋಹದ ಬಗ್ಗೆ ಇತಿಹಾಸದ ಉಲ್ಲೇಖಗಳಲ್ಲಿ, ಇಬ್ನ್ ಇಸ್‌ಹಾಕ್ ಹೇಳುತ್ತಾರೆ: ಶಾಸ್ ಬಿನ್ ಕೈಸ್ ಎಂಬ ಮುದುಕನ ಮನಸ್ಸು ಮುಸ್ಲಿಮರ ಬಗ್ಗೆ ದ್ವೇಷ ಮತ್ತು ಅಸೂಯೆಯಿಂದ ತುಂಬಿತ್ತು. ಒಮ್ಮೆ ಔಸ್ ಮತ್ತು ಖಝ್‌ರಜ್‌ಗೆ ಸೇರಿದ ಕೆಲವು ಸಹಚರರು ಒಂದು ಸಭೆಯಲ್ಲಿ ಒಟ್ಟಿಗೆ ಕುಳಿತು ಚರ್ಚಿಸುತ್ತಿದ್ದರು ಮತ್ತು ಶಾಸ್ ಬಿನ್ ಕೈಸ್ ಅಲ್ಲಿಂದ ಹಾದುಹೋದರು. ಅಜ್ಞಾನದ ಯುಗದ ಹಗೆತನವನ್ನು ಮರೆತು, ಇಸ್ಲಾಮಿನ ಅನುಗ್ರಹಕ್ಕೆ ಪಾತ್ರರಾಗಿ ಒಬ್ಬರನ್ನೊಬ್ಬರು ಪ್ರೀತಿಸುತ್ತಾ ಶಾಂತಿಯುತವಾಗಿ ಕುಳಿತಿದ್ದನ್ನು ಕಂಡಾಗ ಆತನು ಅಸೂಯೆಗೆ ಒಳಗಾದನು. ಬನೂಕೈಲಾ ಎಂದರೆ ಔಸ್ ಮತ್ತು ಖಾಝ್‌ರಜ್‌ನ ಮುಖ್ಯಸ್ಥರು ಈ ನಗರದಲ್ಲಿ ಒಂದಾಗಿದ್ದರು. ಆತನು ಅಲ್ಲಿ ಒಗ್ಗೂಡಿದ ಬನೂಕೈಲಾ, ಔಸ್ ಮತ್ತು ಖಝ್‌ರಜ್‌ನ ಮುಖ್ಯಸ್ಥರಿಗೆ ಸ್ವಯಂಪ್ರೇರಿತವಾಗಿ ಹೇಳಿದನು: ಅಲ್ಲಾಹನ ಆಣೆ!! ಅವರ ಗೌರವಾನ್ವಿತ ಜನರು ಒಗ್ಗೂಡಿದಾಗ, ಅವರೊಂದಿಗೆ ಇಲ್ಲಿ ಉಳಿಯಲು ನಮಗೆ ಸ್ಥಳವಿಲ್ಲ. ಅವರನ್ನು ಪ್ರಚೋದಿಸಲು ಯತ್ನಿಸಿದನು. ಅವನೊಂದಿಗೆ ಒಬ್ಬ ಯಹೂದಿ ಯುವಕನಿದ್ದನು. ಅವನು ಆ ಯುವಕನಿಗೆ ಅವರ ಬಳಿಗೆ ಹೋಗಿ ಅವರೊಂದಿಗೆ ಕುಳಿತುಕೊಳ್ಳುವಂತೆ ಆದೇಶಿಸಿದನು. ನಂತರ ಅವರಿಗೆ ಬುಆಸ್ ಯುದ್ಧ ಮತ್ತು ಅದರ ಹಿಂದಿನ ಘಟನೆಗಳ ಬಗ್ಗೆ ಪ್ರಸ್ತಾಪಿಸು ಮತ್ತು ಅದರ ಬಗ್ಗೆ ಅವರು ತಮ್ಮಲ್ಲಿ ಹೇಳಿಕೊಂಡಿದ್ದ ಕೆಲವು ಕವನಗಳನ್ನು ಓದಿಹೇಳು. ಜಾಹಿಲಿಯಾ ಅವಧಿಯಲ್ಲಿ ಔಸ್ ಮತ್ತು ಖಝ್‌ರಜ್ ನಡುವೆ ಬುಆಸ್ ಯುದ್ಧವು ನಡೆದಿತ್ತು, ಇದರಲ್ಲಿ ಔಸ್ ಗೋತ್ರದವರು ಖಝ್‌ರಜ್ ವಿರುದ್ಧ ಗೆದ್ದಿದ್ದರು. ಆ ಸಮಯದಲ್ಲಿ, ಔಸ್‌ನ ನಾಯಕ ಹುದೈರ್ ಬಿನ್ ಸಿಮಾಕ್ ಅಶ್ಹಾಲಿ ಆಗಿದ್ದನು. ಇವರು ಹಝ್ರತ್ ಉಸೇಯದ್(ರ) ಅವರ ತಂದೆಯಾಗಿದ್ದರು. ಖಝ್‌ರಜ್‌ನ ನಾಯಕ ಅಮ್ರೋ ಬಿನ್ ನುಮಾನ್ ಬಯಾಜಿ ಆಗಿದ್ದನು. ಈ ಯುದ್ಧದಲ್ಲಿ ಇವರಿಬ್ಬರೂ ಮೃತರಾಗಿದ್ದರು. ಆ ಯಹೂದಿ ಯುವಕನು ಮುಸ್ಲಿಮರ ನಡುವೆ ಕುಳಿತು ಅದನ್ನು ಉಲ್ಲೇಖಿಸಿ ಕೀಟಲೆ ಮಾಡಿ ಬೆಂಕಿ ಹಚ್ಚಿದನು. ಔಸ್ ಮತ್ತು ಖಝ್‌ರಜ್ ಅವರ ಹಳೆಯ ಸುಪ್ತ ಭಾವನೆಗಳು ಮತ್ತೆ ಭುಗಿಲೆದ್ದವು ಮತ್ತು ಅವರು ಕೋಪಗೊಂಡರು. ಅವರ ನಡುವೆ ಜಗಳ ಶುರುವಾಯಿತು. ಒಬ್ಬರಿಗೊಬ್ಬರು ಜಗಳವಾಡಲು ಮತ್ತು ಒಬ್ಬರಮೇಲೆ ಇನ್ನೊಬ್ಬರು ಶ್ರೇಷ್ಠರು ಎಂಬು ಹೇಳಲು ಪ್ರಾರಂಭಿಸಿದರು. ವಿಷಯವು ಎಷ್ಟು ಉಲ್ಬಣಗೊಂಡಿತು ಎಂದರೆ ಎರಡು ಗೋತ್ರಗಳ ಒಬ್ಬ ವ್ಯಕ್ತಿಯು ಮುಖಾಮುಖಿಯಾಗಿ ಮಂಡಿಯೂರಿ ಪರಸ್ಪರ ವಾದಿಸಲು ಪ್ರಾರಂಭಿಸಿದರು. ಸಂವಾದವು ಹೆಚ್ಚಾಯಿತು. ಔಸ್ ಕಡೆಯಲ್ಲಿ ಔಸ್ ಬಿನ್ ಕೈಝಿ ಮತ್ತು ಖಝ್‌ರಜ್ ಕಡೆಯಲ್ಲಿ ಜಬ್ಬಾರ್ ಬಿನ್ ಸಖರ್ ಇದ್ದರು. ಚರ್ಚೆಯ ಸಮಯದಲ್ಲಿ, ಅವರಲ್ಲಿ ಒಬ್ಬರು ಇನ್ನೊಬ್ಬರಿಗೆ ಹೇಳಿದರು, ನೀವು ಬಯಸಿದರೆ, ನಾವು ಈಗ ಈ ಯುದ್ಧವನ್ನು ನವೀಕರಿಸಬಹುದು. ಹೀಗಾಗಿ ಎರಡೂ ಕಡೆಯವರು ಸಿಟ್ಟಿಗೆದ್ದು ನಾವು ಸಿದ್ಧರಿದ್ದೇವೆ ಎಂದರು. ಈಗ ಒಂದು ಕಡೆ ಅವರು ಮುಸ್ಲಿಮರಾಗಿದ್ದಾರೆ. ಇನ್ನೊಂದೆಡೆ ಈ ಅಜ್ಞಾನವೂ ಸಾಗುತ್ತಿದೆ. ತದನಂತರ ಅವರು ನಿಮ್ಮ ಪ್ರತಿಜ್ಞೆಯ ಸ್ಥಳ ಹರ್ರಾ ಎಂದು ಹೇಳಲು ಪ್ರಾರಂಭಿಸಿದರು. ಮದೀನಾವು ಎರಡು ಹರ್ರಾಗಳ ನಡುವಿನ ಹರ್ರಾ ಆಗಿದೆ. ಕಪ್ಪು ಕಲ್ಲಿನ ಭೂಮಿಗೆ ಹರ್‍ರಾ ಎಂದು ಕರೆಯಲಾಗುತ್ತದೆ ಮತ್ತು ಪೂರ್ವಕ್ಕೆ ಹರ್ರಾ ವಾಕಿಮ್ ಇದೆ ಅದನ್ನು ಹರ್ರಾ ಬನೂ ಖುರೈಝಾ ಎಂದೂ ಕರೆಯಲಾಗುತ್ತದೆ. ಎರಡನೆಯದು ಹರ್‍ರತುಲ್ ವಬುರ ಎಂದಿದೆ ಇದು ಪಶ್ಚಿಮ ದಿಕ್ಕಿನ ಕಡೆ ಇದೆ. ಒಂದು ಪೂರ್ವಕ್ಕೆ ಮತ್ತು ಇನ್ನೊಂದು ಪಶ್ಚಿಮಕ್ಕೆ. ಇವೆರಡರ ನಡುವೆ ಮೂರು ಮೈಲುಗಳ ಅಂತರವಿದೆ (ಅಂದರೆ ಹರ್‍ರತುಲ್ ವಬುರ ಮತ್ತು ಮದೀನಾದ ನಡುವೆ). ಅದೇ ಸಮಯದಲ್ಲಿ, ಈ ಶಬ್ದವು ಹುಟ್ಟಿಕೊಂಡಿತು. ಆಯುಧಗಳು! ಆಯುಧಗಳು! ಇದಾದ ನಂತರ ವಾತಾವರಣ ಬಿಸಿಯಾಗಿ ಎರಡೂ ಕಡೆಯವರು ಯುದ್ಧಕ್ಕೆ ಸಿದ್ಧತೆ ನಡೆಸತೊಡಗಿದರು. ಎರಡೂ ಗೋತ್ರಗಳ ಜನರು ನಿಗದಿತ ಸಮಯಕ್ಕೆ ಹರ್‍ರಾಗೆ ಹೊರಟರು. ರಕ್ತಸಿಕ್ತ ಯುದ್ಧವು ಪ್ರಾರಂಭವಾಗುವ ಸಾಧ್ಯತೆಯಿತ್ತು, ಆದರೆ ಅಲ್ಲಾಹನ ಅನುಗ್ರಹದಿಂದ ಹಝ್ರತ್ ಪೈಗಮಭರ್(ಸ) ಅವರಿಗೆ ಈ ಸಂಪೂರ್ಣ ಪರಿಸ್ಥಿತಿಯನ್ನು ತಿಳಿಸಲಾಯಿತು. ಸುದ್ದಿ ತಿಳಿದ ತಕ್ಷಣ ಅವರು ಮುಹಾಜಿರ್ ಸಹಚರರೊಂದಿಗೆ ಔಸ್ ಮತ್ತು ಖಝ್‌ರಜ್ ಜನರ ಬಳಿಗೆ ಹೋದರು. ಅವರು ಎಲ್ಲರನ್ನೂ ಬಹಳ ಬುದ್ಧಿವಂತಿಕೆಯಿಂದ ಸಂಬೋಧಿಸಿ ಹೇಳಿದರು: ಅಲ್ಲಾಹ್! ಅಲ್ಲಾಹ್! ನಾನಿರುವಾಗ ಅಜ್ಞಾನದ ಕರೆ? ಅದೂ ಸರ್ವಶಕ್ತನಾದ ಅಲ್ಲಾಹನು ನಿಮಗೆ ಇಸ್ಲಾಮಿನ ಮಾರ್ಗದರ್ಶನವನ್ನು ಅನುಗ್ರಹಿಸಿದ ನಂತರ. ಅದರಿಂದ ನಿಮಗೆ ಗೌರವ ಲಭಿಸಿದೆ. ಅಜ್ಞಾನದ ಪರಿಣಾಮಗಳು ನಿಮ್ಮಿಂದ ದೂರಗೊಳಿಸಲಾಗಿತ್ತು. ಆತನು ನಿಮ್ಮನ್ನು ಅವಿಶ್ವಾಸದಿಂದ ಮುಕ್ತಗೊಳಿಸಿದ್ದಾನೆ ಮತ್ತು ನಿಮ್ಮ ಮನಸ್ಸಿನಲ್ಲಿ ಪ್ರೀತಿ ಮತ್ತು ವಾತ್ಸಲ್ಯವನ್ನು ಇರಿಸಿದ್ದಾನೆ.

ಈ ವಿಷಯಗಳ ಹೊರತಾಗಿಯೂ, ನೀವು ಈಗ ಈ ಅಜ್ಞಾನವನ್ನು ಮಾಡುತ್ತಿದ್ದೀರಿ. ಹಝ್ರತ್ ಪೈಗಂಬರ್(ಸ) ಅವರ ಈ ಸಂಭಾಷಣೆಯು ಅವರ ಮೇಲೆ ಎಷ್ಟು ಪ್ರಭಾವ ಬೀರಿತು ಎಂದರೆ ಅವರು ತಮ್ಮ ಕಾರ್ಯಗಳಿಗೆ ತೀವ್ರ ವಿಷಾದ ವ್ಯಕ್ತಪಡಿಸಿ ಅಳಲು ಪ್ರಾರಂಭಿಸಿದರು. ಪರಸ್ಪರ ಜಗಳವಾಡಲು ನೆರೆದಿದ್ದ ಔಸ್ ಮತ್ತು ಖಝ್‌ರಜ್ ಜನರು ಪರಸ್ಪರ ಅಪ್ಪಿಕೊಂಡರು. ನಂತರ ಅವರು ಹಝ್ರತ್ ಪೈಗಂಬರ್(ಸ) ಅವರಿಗೆ ವಿಧೇಯತೆಯನ್ನು ತೋರಿಸಿದರು. ಇದು ಇಬ್ನ್ ಹಿಶಾಮ್ ಅವರ ಜೀವನ ಚರಿತ್ರೆಯ ವಿವರಣೆಯಾಗಿದೆ. (ಸೀರತ್ ಇಬ್ನ್ ಹಿಶಾಮ್, ಪುಟ 385-386, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 2001) (ಫರ್ಹಾಂಗ್ ಸೀರತ್, ಪುಟ 101-102, ಜೋರ್ ಅಕಾಡೆಮಿ ಕರಾಚಿ)

ಯಹೂದಿಗಳ ಒಪ್ಪಂದದ ಉಲ್ಲಂಘನೆಯ ಬಗ್ಗೆ ಹೀಗೆ ಬರೆಯಲಾಗಿದೆ: ಬದ್ರ್ ಯುದ್ಧದಲ್ಲಿ ಅಲ್ಲಾಹನು ಮುಸ್ಲಿಮರಿಗೆ ವಿಜಯವನ್ನು ನೀಡಿದಾಗ ಯಹೂದಿಗಳ ಕುತಂತ್ರಗಳು ಸ್ಪಷ್ಟವಾಗಿ ಬೆಳಕಿಗೆ ಬಂತು. ಮತ್ತು ಹಝ್ರತ್ ಪೈಗಂಬರ್(ಸ) ಮತ್ತು ಮುಸಲ್ಮಾನರಿಂದ ಅವರ ಅಸೂಯೆಯೂ ವ್ಯಕ್ತವಾಯಿತು. ಅವರ ಈ ಅಸೂಯೆಯ ಕಾರಣದಿಂದ ಅವರು ತಮ್ಮ ಒಪ್ಪಂದವನ್ನು ಕೊನೆಗೊಳಿಸಿದರು. ಅವರು ಹೇಳಲಾರಂಭಿಸಿದರು, ಓ ಮುಹಮ್ಮದ್! ನಾವು ನಿಮ್ಮ ಜನರಂತೆ ಇದ್ದೇವೆ ಎಂದು ನೀವು ಭಾವಿಸುತ್ತೀರಾ. ನೀವು ಯುದ್ಧದ ಕುತಂತ್ರಗಳಿಂದ ವಂಚಿತರಾಗಿರುವ ಸಮೂದಾಯದ ವಿರುದ್ಧ ಹೋರಾಡಿದ್ದೀರಿ ಮತ್ತು ನೀವು ಅವರ ಮೇಲೆ ಪ್ರಾಬಲ್ಯ ಸಾಧಿಸುವ ಅವಕಾಶವನ್ನು ಪಡೆದುಕೊಂಡಿದ್ದೀರಿ ಎಂದು ಆತ್ಮವಂಚನೆಗೆ ಒಳಗಾಗಬೇಡಿ, ಅಂದರೆ ಅವರು ಬದ್ರ್ ಕದನದ ಬಗ್ಗೆ ಮಾತನಾಡುತ್ತಿದ್ದಾರೆ ಮತ್ತು ನೀವು ಮಕ್ಕಾದ ಅವಿಶ್ವಾಸಿಗಳನ್ನು ಸೋಲಿಸಿದ್ದೀರಿ. ಆದರೆ ನಾವು ಹಾಗಲ್ಲ. ನಾವು ಬಹಳ ಧೈರ್ಯಶಾಲಿಗಳು. ಅಲ್ಲಾಹನ ಆಣೆ! ನಾವು ನಿಮ್ಮೊಂದಿಗೆ ಯುದ್ಧವಾಡಿದರೆ, ನಾವು ಪುರುಷರೆಂದು ನಿಮಗೆ ತಿಳಿಯುತ್ತದೆ, ಮತ್ತು ಯಹೂದಿಗಳಲ್ಲಿ ಮೊತ್ತಮೊದಲು ಒಪ್ಪಂದದ ಉಲ್ಲಂಘನೆ ಮಾಡಿದ್ದು ಬನೂಖೈನ್‌ಖಾಅ್ ಗೋತ್ರವಾಗಿತ್ತು.

ಮುಸಲ್ಮಾನರ ಜೊತೆ ಅವರ ಕಿರುಕುಳದ ಕಿಡಿಗೇಡಿತನದ ಬಗ್ಗೆ ಬರೆದ ಘಟನೆಯೂ ಇದೆ, ಅದು ಮುಸ್ಲಿಂ ಮಹಿಳೆಯ ಬಗ್ಗೆ ಆಗಿದೆ. ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಅವರ ದ್ವೇಷದ ಅಭಿವ್ಯಕ್ತಿಯ ಜೊತೆಗೆ ಈ ಘಟನೆಯು ಸಂಭವಿಸಿದೆ: ಓರ್ವ ಅನ್ಸಾರಿಯ ಪತ್ನಿ ಒಂಟೆಗಳು ಮತ್ತು ಮೇಕೆಗಳು ಸೇರಿದಂತೆ ತನ್ನ ಸರಕುಗಳೊಂದಿಗೆ ಅದನ್ನು ಮಾರಿ ಅದರಿಂದ ಲಾಭಗಳಿಸಲು ಬನೂ ಖೈನ್‌ಖಾಅ್‌ದ ಮಾರುಕಟ್ಟೆಗೆ ಬಂದಿದ್ದಳು. ಅವಳು ಈ ಸರಕುಗಳನ್ನು ಬನೂ ಖೈನ್‌ಖಾಅ್‌ದ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದಳು ಮತ್ತು ಅದರ ನಂತರ ಅವಳು ಕೆಲವು ಆಭರಣಗಳನ್ನು ಖರೀದಿಸಲು ಅಲ್ಲಿ ಯಹೂದಿ ಅಕ್ಕಸಾಲಿಗನೊಂದಿಗೆ ಕುಳಿತುಕೊಂಡಳು. ಆಕೆ ತನ್ನ ದೇಹ ಮತ್ತು ಮುಖವನ್ನು ಪರದೆ

ಮಾಡಿದ್ದಳು. ಕೆಲವು ಯಹೂದಿ ಪುಂಡರು ಅವಳಿಗೆ ತನ್ನ ಮುಖವನ್ನು ತೋರಿಸಲು ಒತ್ತಾಯಿಸಿದರು ಆದರೆ ಆಕರು ಹಾಗೆ ಮಾಡಲು ನಿರಾಕರಿಸಿದಳು. ಅಕ್ಕಸಾಲಿಗ ಅಂಗಡಿಯವನು ಎದ್ದು ಅವಳ ಮುಸುಕಿನ ಒಂದು ಮೂಲೆಯನ್ನು ರಹಸ್ಯವಾಗಿ ಅವಳ ಬೆನ್ನ ಹಿಂದೆ ಯಾವುದೋ ಒಂದು ವಸ್ತುವಿಗೆ ಕಟ್ಟಿದನು ಅಥವಾ ಒಂದು ವರದಿಯ ಪ್ರಕಾರ ಅವನು ಮೌನವಾಗಿ ಅವಳ ಮೇಲಂಗಿಯ ಒಂದು ತುದಿಯನ್ನು ಕೊಕ್ಕೆ ಅಥವಾ ಮೊಳೆಗೆ ಸಿಕ್ಕಿಸಿದನು. ಮಹಿಳೆಗೆ ಇದು ತಿಳಿದಿರಲಿಲ್ಲ. ಮಹಿಳೆ ಹೊರಡಲು ಎದ್ದು ನಿಂತಾಗ ಬಟ್ಟೆ ಸಿಕ್ಕಿಕೊಂಡು ಆಕೆಯ ಬಟ್ಟೆ ಕಳಚಿ ಹೋಯಿತು ಹೀಗೆ ಆಕೆಯ ಗುಪ್ತಾಂಗಗಳು ಬಹಿರಂಗವಾದವು. ಯಹೂದಿಗಳು ಇದನ್ನು ಕಂಡು ನಕ್ಕರು. ಮಹಿಳೆ ಅವರ ಅಸಂಬದ್ಧತೆಯನ್ನು ಕೂಗಲು ಪ್ರಾರಂಭಿಸಿದರು. ಅಲ್ಲಿಂದ ಓರ್ವ ಮುಸಲ್ಮಾನನು ಹಾದುಹೋಗುತ್ತಿದ್ದನು, ಅವನು ಯಹೂದಿಗಳ ದುಷ್ಟತನವನ್ನು ನೋಡಿದ ತಕ್ಷಣ, ಅವನು ಯಹೂದಿ ಅಕ್ಕಸಾಲಿಗನ ಕಡೆಗೆ ಧಾವಿಸಿ ಅವನನ್ನು ಕತ್ತಿಯಿಂದ ಕೊಂದನು. ಇದನ್ನು ನೋಡಿದ ಯಹೂದಿಗಳು ಈ ಮುಸಲ್ಮಾನನ ಮೇಲೆ ದಾಳಿ ಮಾಡಿ ಆತನನ್ನು ಕೊಂದುಹಾಕಿದರು. ಈ ಘಟನೆಯ ನಂತರ, ಬನೂ ಖೈನ್‌ಖಾಅ್‌ದ ಯಹೂದಿಗಳ ವಿರುದ್ಧ ಮುಸ್ಲಿಮರಲ್ಲಿ ದೊಡ್ಡ ಕೋಪವಿತ್ತು. ಅಂತಹ ಕ್ರಿಯೆಗಳಿಗೆ ನಮ್ಮ ಮತ್ತು ಅವರ ನಡುವೆ ಯಾವುದೇ ಒಪ್ಪಂದವಿಲ್ಲ ಎಂದು ಹಝ್ರತ್ ಪೈಗಂಬರ್(ಸ) ಅವರು ಗೋತ್ರದವರಿಗೆ ಹೇಳಿದರು. ಹಝ್ರತ್ ಉಬಾದಾ ಬಿನ್ ಸಮಿತ್(ರ) ಹೇಳಿದರು: ಯಾ ರಸೂಲಲ್ಲಾಹ್(ಸ)! ನಾನು ಅಲ್ಲಾಹ್ ಮತ್ತು ಅವನ ಸಂದೇಶವಾಹಕ ಮತ್ತು ಮುಸ್ಲಿಮರ ಒಡನಾಡಿಯಾಗಿದ್ದೇನೆ ಮತ್ತು ಆ ಅವಿಶ್ವಾಸಿಗಳ ಒಪ್ಪಂದದಿಂದ ನಾನು ಮುಕ್ತನಾಗಿದ್ದೇನೆ. (ಅಸ್ಸೀರತುಲ್ ಹಲಬೀಯ, ಸಂಘುಟ-2, ಪುಟ-284, ದಾರುಲ್ ಕುತುಬ್ ಇಲ್ಮಿಯ ಬೈರುತ್ 2002) (ಸೀರತ್ ಇಬ್ನೆ ಹಿಶಾಮ್, ಪುಟ-514, ದಾರುಲ್ ಕುತುಬ್ ಇಲ್ಮಿಯ 2001) ಒಟ್ಟಾರೆಯಾಗಿ ಹಝ್ರತ್ ಪೈಗಂಬರ್(ಸ) ಬನೂ ಖೈನ್‌ಖಾಅ್‌ದವರಿಗೆ ಮನವರಿಕೆ ಮಾಡಿಸಲು ಬಹಳ ಪ್ರಯತ್ನ ಮಾಡಿದರು. ಆದರೆ ಅವರು ಮನವರಿಕೆ ಮಾಡುವುದಕ್ಕೆ ಬದಲಾಗಿ ಮುಸ್ಲಿಮರಿಗೆ ಬಹಿರಂಗವಾಗಿ ಬೆದರಿಕೆ ಹಾಕಲು ಆರಂಭಿಸಿದರು.

ಅದರ ವಿವರಣೆಯನ್ನು ಈ ಕೆಳಗಿನಂತೆ ಬರೆಯಲಾಗಿದೆ: ಬನೂ ಖೈನ್‌ಖಾಅ್ ಅವರನ್ನು ಒಟ್ಟುಗೂಡಿಸಿದ ನಂತರ, ಹಝ್ರತ್ ಪೈಗಂಬರ್(ಸ) ಹೇಳಿದರು: ಓ ಯಹೂದಿಗಳ ಗುಂಪು! ಬದ್ರ್ ಸಂದರ್ಭದಲ್ಲಿ ಖುರೈಷಿಗಳ ಮೇಲೆ ಸಂಭವಿಸಿದ ವಿಪತ್ತನ್ನು ಅಲ್ಲಾಹನಿಂದ ತಪ್ಪಿಸಲು ಪ್ರಯತ್ನಿಸಿ. ಆದ್ದರಿಂದ, ವಿಧೇಯರಾಗಿರಿ ಏಕೆಂದರೆ ನಾನು ಸರ್ವಶಕ್ತನಾದ ಅಲ್ಲಾಹನಿಂದ ಕಳುಹಿಸಲ್ಪಟ್ಟ ಸಂದೇಶವಾಹಕನಾಗಿದ್ದೇನೆ ಮತ್ತು ಈ ಸತ್ಯವನ್ನು ನಿಮ್ಮ ಪುಸ್ತಕದಲ್ಲಿ ದಾಖಲಿಸಲಾಗಿದೆ ಮತ್ತು ಅಲ್ಲಾಹನು ನಿಮ್ಮಿಂದ ತೆಗೆದುಕೊಂಡ ಪ್ರತಿಜ್ಞೆಯನ್ನು ನೀವು ಕಂಡುಕೊಂಡಿದ್ದೀರಿ. ಅದಕ್ಕೆ ಅವರು ಹೇಳಿದರು, ಓ ಮುಹಮ್ಮದ್! (ಸಲ್ಲಲ್ಲಾಹು ಅಲೈಹಿವ ಸಲ್ಲಮ್) ನಾವು ನಿಮ್ಮ ಸಮುದಾಯದ ಜನರಂತೆ ಎಂದು ನೀವು ಬಹುಶಃ ಭಾವಿಸುತ್ತೀರಿ. ಮೋಸ ಹೋಗಬೇಡಿ ಏಕೆಂದರೆ ಇಲ್ಲಿಯವರೆಗೆ ನೀವು ಯುದ್ಧ ಮತ್ತು ಅದರ ವಿಧಾನಗಳನ್ನು ತಿಳಿದಿಲ್ಲದ ಜನರೊಂದಿಗೆ ಸಂಪರ್ಕಕ್ಕೆ ಬಂದಿದ್ದೀರಿ. ಆದ್ದರಿಂದ ನೀವು ಅವರನ್ನು ಸುಲಭವಾಗಿ ಸೋಲಿಸಿದ್ದೀರಿ, ಆದರೆ ಅಲ್ಲಾಹ ಆಣೆ! ನೀವು ನಮ್ಮೊಂದಿಗೆ ಹೋರಾಡಿದರೆ, ಧೈರ್ಯಶಾಲಿಗಳೊಂದಿಗೆ ಹೋರಾಡಬೇಕಾಯಿತು ಎಂದು ನಿಮಗೆ ತಿಳಿಯುತ್ತದೆ. ಮತ್ತೊಂದು ವರದಿಯಲ್ಲಿ, ಬದ್ರ್ ಯುದ್ಧದ ಸಂದರ್ಭದಲ್ಲಿ ಯಹೂದಿಗಳ ದಂಗೆಯ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿದಾಗ, ಅವರು(ಸ) ಯಹೂದಿಗಳನ್ನು ಬನೂ ಖೈನ್‌ಖಾಅ್‌ದ ಮಾರುಕಟ್ಟೆಯಲ್ಲಿ ಈ ಎಚ್ಚರಿಕೆ ನೀಡಿದರು.

ಆದಾಗ್ಯೂ, ಇದು ಎಚ್ಚರಿಕೆಯಾಗಿತ್ತು. ಅದಕ್ಕೆ ಅವರ ಉತ್ತರ ಇದಾಗಿತ್ತು. ಅದರ ನಂತರ ಯಹೂದಿಯರು ಕೋಟೆಯೊಳಗೆ ಹೋಗಿ ಅಡಗಿ ಕುಳಿತುಕೊಂಡರು. ಹಝ್ರತ್ ಪೈಗಂಬರ್(ಸ) ಕೋಟೆಯ ಕಡೆಗೆ ಹೊರಟರು ಮತ್ತು ಅವರು (ಸ) ಹಝ್ರತ್ ಅಬೂ ಲಬಾಬ(ರ) ಅವರನ್ನು ಮದೀನಾದಲ್ಲಿ ತಮ್ಮ ಉಪನಾಯಕನನ್ನಾಗಿ ಮಾಡಿದರು. ಅವರ ಧ್ವಜವು ಬಿಳಿಬಣ್ಣದ್ದಾಗಿತ್ತು ಮತ್ತು ಅದನ್ನು ಅವರ ಚಿಕ್ಕಪ್ಪ ಹಝ್ರತ್ ಹಂಝಾ(ರ) ಅವರು ಹೊತ್ತಿದ್ದರು. 15 ದಿನಗಳ ತನಕ ಬನೂ ಖೈನ್‌ಖಾಅ್ ಗೋತ್ರದ ಕೋಟೆಯ ಮುತ್ತಿಗೆ ಹಾಕಲಾಯಿತು. (ಅಸ್ಸೀರತುಲ್ ಹಲಬೀಯ, ಸಂಘುಟ-2, ಪಉಟ-285, ದಾರುಲ್ ಕುತುಬ್ ಇಲ್ಮಿಯ ಬೈರುತ್ 2002) (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ-4, ಪುಟ-179, ದಾರುಲ್ ಕುತುಬ್ ಇಲ್ಮಿಯ ಬೈರುತ್ 1993)

ಸರ್ವಶಕ್ತನಾದ ಅಲ್ಲಾಹನು ಅವರ ಮನಸ್ಸಿನಲ್ಲಿ ಮುಸ್ಲಿಮರ ಭಯವನ್ನು ಸೃಷ್ಟಿಸಿದನು. ಬನೂ ಖೈನ್‌ಖಾಅ್‌ದ ಯಹೂದಿಗಳಲ್ಲಿ, ಕೋಟೆಯನ್ನು ಕಾವಲು ಕಾಯುತ್ತಿದ್ದ ನಾನೂರು ಯೋಧರು ಮತ್ತು ಮುನ್ನೂರು ಮಂದಿ ರಕ್ಷಾಕವಚದಲ್ಲಿದ್ದರು. ಅಂತಿಮವಾಗಿ, ಈ ಮುತ್ತಿಗೆಯನ್ನು ಸಹಿಸಲಾಗದೇ ಸದಾ ಕಾಲಕ್ಕೆ ಮದೀನವನ್ನು ಬಿಟ್ಟು ಹೋಗಲು ಅನುವು ಮಾಡಿಕೊಡುವಂತೆ ಯಹೂದಿಯರು ಸ್ವತಃ ವಿನಂತಿಸಿಕೊಂಡರು. ಮತ್ತು ನಮ್ಮ ಮಹಿಳೆಯರು ಮತ್ತು ಮಕ್ಕಳನ್ನು ಮಾತ್ರ ನಮ್ಮೊಂದಿಗೆ ಕರೆದೊಯ್ಯಲು ಬಿಡಲು ಮತ್ತು ಉಳಿದ ಆಸ್ತಿ ಮತ್ತು ಸಂಪತ್ತನ್ನು ನೀವು ನಿಮ್ಮ ಬಳಿ ಇರಿಸಿಕೊಳ್ಳಿ ಎಂದರು ಆ ಸಂಪತ್ತಿನಲ್ಲಿ ಆಯುಧಗಳನ್ನು ಸಹ ಒಳಗೊಂಡಿತ್ತು. ಹಝ್ರತ್ ಪೈಗಂಬರ್(ಸ) ಯಹೂದಿಯರ ಮಾತನ್ನು ಸಮ್ಮತಿಸಿದರು ಮತ್ತು ಮದೀನದಿಂದ ಹೊರಟುಹೋಗಲು ಆಜ್ಞಾಪಿಸಿದರು. ಸೀರತ್ ಹಲ್ಬಿಯಾದಲ್ಲಿ ಇದನ್ನು ಹೀಗೆ ದಾಖಲಿಸಲಾಗಿದೆ. (ಅಸ್ಸೀರತುಲ್ ಹಲಬೀಯ, ಸಂಪುಟ-2, ಪುಟ-285, 287, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2002)

ಆದರೆ ಜೀವನಚರಿತ್ರೆಯ ಹೆಚ್ಚಿನ ಪುಸ್ತಕಗಳಲ್ಲಿ ಇದನ್ನು ಬರೆಯಲಾಗಿದೆ. ಅಬ್ದುಲ್ಲಾ ಬಿನ್ ಉಬಯ್ ಬಿನ್ ಸಲೂಲ್‌ನ ಬಗ್ಗೆ ಹೀಗೆ ವರದಿಯಾಗಿದೆ ಅಂದರೆ ಈ ಸಂದರ್ಭದಲ್ಲಿ ಅವನು ಹಝ್ರತ್ ಪೈಗಂಬರ್(ಸ) ಅವರ ಸೇವೆಗೆ ಪದೇ ಪದೇ ಹಾಜರಾಗುತ್ತಿದ್ದನು. ಅವನು ಬನೂಖೈನ್‌ಖಾಅ್‌ದ ಪ್ರತಿಜ್ಞಾಬದ್ಧನಾಗಿದ್ದನು ಆದ್ದರಿಂದ ಆತನು ಪದೇ ಪದೇ ಶಿಫಾರಸು ಮಾಡಿದನು ಮತ್ತು ಮನವಿ ಮಾಡಿದನು ಮತ್ತು ಹಝ್ರತ್ ಪೈಗಂಬರ್(ಸ) ಬನೂ ಖೈನ್‌ಖಾಅ್‌ದವರನ್ನು ಕ್ಷಮಿಸಬೇಕೆಂದು ವಿವಿಧ ರೀತಿಯಲ್ಲಿ ಕೇಳಿಕೊಂಡನು. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ-4, ಪುಟ-179-180, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1993) (ಸೀರತ್ ಇಬ್ನೆ ಹಿಶ್ಶಾಮ್, ಪುಟ-514, ದಾರುಲ್ ಕುತುಬ್ ಇಲ್ಮಿಯ 2001) (ಶರ್ಹ್ ಅಲ್-ಝುರ್ಕಾನಿ ಅಲಲ್-ಮವಾಹಿಬ್ ಅಲ್-ಸಾನಿ, ಸಂಪುಟ-2, ಪುಟ-351, ದಾರುಲ್ ಕುತುಬ್ ಇಲ್ಮಿಯ ಬೈರುತ್ 1996)

ಈ ವರದಿಯಿಂದ ಹಝ್ರತ್ ಪೈಗಂಬರ್(ಸ) ಅವರನ್ನು ವಧಿಸಲು ಉದ್ದೇಶಿಸಿದ್ದರು ಮತ್ತು ಅಬ್ದುಲ್ಲಾ ಬಿನ್ ಉಬಯ್ಯ್‌ನ ನಿರಂತರ ಶಿಫಾರಸಿನ ಕಾರಣ ಅವರನ್ನು ಕ್ಷಮಿಸಲಾಗಿದೆ ಎಂಬ ಭಾವನೆಯನ್ನು ನೀಡುತ್ತದೆ, ಆದರೆ ಇದು ವಾಸ್ತವವಲ್ಲ.

ಹಝ್ರತ್ ಪೈಗಂಬರ್(ಸ) ಅವರು ಅವರ ಮಹಿಳೆಯರನ್ನು, ಮಕ್ಕಳನ್ನು ಅಥವಾ ಆ ಜನರನ್ನು ವಧಿಸುವ ಉದ್ದೇಶವನ್ನು ಎಂದಿಗೂ ಹೊಂದಿರಲಿಲ್ಲ. ವಾಸ್ತವವಾಗಿ, ಅಂತಹ ವರದಿಗಳು ಅನುಮಾನಾಸ್ಪದವಾಗಿವೆ. ಆದ್ದರಿಂದ, ಇತಿಹಾಸಕಾರ ಸೈಯದ್ ಬರ್ಕಾತ್ ಅಹ್ಮದ್ ಅವರು ಅಂತಹ ವರದಿಗಳ ತೀರ್ಪುಗಾರರಾಗಿದ್ದಾರೆ. ಅವರು ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ: ಯಹೂದಿಗಳ ಶರಣಾಗತಿಯ ನಂತರ, ಅಬ್ದುಲ್ಲಾ ಬಿನ್ ಉಬಯ್ ಹಝ್ರತ್ ಪೈಗಂಬರ್(ಸ) ಅವರ ಸೇವೆಗೆ ಬಂದು ನನ್ನ ಜನರೊಂದಿಗೆ ಸೌಮ್ಯವಾಗಿ ವರ್ತಿಸಿರಿ ಎಂದು ಹೇಳಿದನು ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು ನನ್ನ ಬಳಿ ಬರಬೇಡ. ಅದಕ್ಕೆ ಇಬ್ನೆ ಉಬಯ್ ಎಂದಿಗೂ ಇಲ್ಲ ಎಂದು ಉತ್ತರಿಸಿದನು. ಅಲ್ಲಾಹನ ಆಣೆ! ನೀವು ನನ್ನ ಜನರಿಗೆ ದಯೆ ತೋರಿಸುವ ತನಕ ನಾನು ನಿಮ್ಮನ್ನು ಬಿಡುವುದಿಲ್ಲ. ನೀವು ಅವರನ್ನು ವಧಿಸುವಿರಾ? ಅಲ್ಲಾಹನ ಆಣೆ! ನನಗೆ ಸಂಪೂರ್ಣವಾಗಿ ಖಚಿತವಾಗಿದೆ ಪರಿಸ್ಥಿತಿ ಬದಲಾಗುತ್ತದೆ. ಇದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಸರಿ, ನೀನೇ ಅವರನ್ನು ಕರೆದುಕೊಂಡು ಹೋಗು ಎಂದರು. ಇಬ್ನೆ ಇಸ್‌ಹಾಕ್, ವಾಖಿದಿ ಮತ್ತು ಇಬ್ನೆ ಸಾಅದ್ ಎಲ್ಲರೂ ಈ ಘಟನೆಯನ್ನು ವಿವರಿಸುತ್ತಾರೆ. ಈ ಮೂರನ್ನು ಓದುವ ಮೂಲಕ, ಹಝ್ರತ್ ಪೈಗಂಬರ್(ಸ) ಅವರ ಮೇಲೆ ಅಬ್ದುಲ್ಲಾ ಬಿನ್ ಉಬೈನ ಪ್ರಭಾವವು ಸ್ವಲ್ಪ ಮಟ್ಟಿಗೆ ಇತ್ತು ಎಂದು ಭಾಸವಾಗಬಹುದು, ಆದರೆ ಅಬ್ದುಲ್ಲಾ ಬಿನ್ ಉಬೈನ ಮಧ್ಯಸ್ಥಿಕೆಯ ಮಾತುಗಳು ಅನುಮಾನಾಸ್ಪದವಾಗಿ ತೋರುತ್ತದೆ. ಇಬ್ನ್ ಇಸ್‌ಹಾಕ್‌ನ ಹೇಳಿಕೆಯಲ್ಲಿ, ಹಝ್ರತ್ ಪೈಗಂಬರ್(ಸ) ಅವರು ಬನೂ ಖೈನ್‌ಖಾಅ್‌ರನ್ನು ವಧಿಸುವ ಉದ್ದೇಶವನ್ನು ಹೊಂದಿದ್ದರು ಎಂದು ಭಾಸವಾಗಬಹುದು ಎಂದು ಹೇಳಲು ಖಂಡಿತವಾಗಿಯೂ ವ್ಯಕ್ತಪಡಿಸಲಾಗಿಲ್ಲ. ಒಬ್ಬ ಇತಿಹಾಸಕಾರ ಅದನ್ನು ಸಾಬೀತುಪಡಿಸುವುದಿಲ್ಲ. ವಾಕದಿಯಲ್ಲಿ ಖಂಡಿತವಾಗಿಯೂ ಈ ಉದ್ದೇಶದ ಸುಳಿವು ಇದೆ ಮತ್ತು ಅದೇ ವಿಷಯವನ್ನು ಇಬ್ನ್ ಸಅದ್ ಪುನರುಚ್ಚರಿಸಿದ್ದಾರೆ, ಆದರೆ ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಅವರು ರಾಜಕೀಯ ನಾಯಕರಾಗಿದ್ದರೂ, ಅವರು ವ್ಯವಹರಿಸಲಿಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅವರ ಶತ್ರುಗಳೊಂದಿಗೆ ಅವರು ಎಂದಿಗೂ ಕಠೋರತೆಯಿಂದ ವ್ಯವಹರಿಸಲಿಲ್ಲ. ಅವರು ಹಿಂಸೆಯನ್ನು ಇಷ್ಟಪಡಲಿಲ್ಲ ಮತ್ತು ಅವರು ಯುದ್ಧಭೂಮಿಗೆ ಹೋದರೂ, ಅವರು

ಬಲವಂತವಾಗಿ ಹೋಗುತ್ತಿದ್ದರು ಮತ್ತು ಅಲ್ಲಿಯೂ ಅವರು ರಕ್ತಪಾತವನ್ನು ತಪ್ಪಿಸುತ್ತಿದ್ದರು. (ರಸೂಲುಲ್ಲಾಹ್(ಸ) ಔರ್ ಯಹೂದ್ ಹಿಜಾಝ್, ಸೈಯದ್ ಬರ್ಕಾತ್ ಅಹ್ಮದ್, ಪುಟ–98–99, ಮಕ್ತಬ ಆಲಿಯಾ ಲಾಹೋರ್)

ಆದಗ್ಯೂ, ಮುತ್ತಿಗೆ ಹಾಕಲಾಗಿತ್ತು ಮತ್ತು ಅವರು ಆಶ್ರಯವೂ ಬೇಡಿದ್ದರು. ಆದ ಕಾರಣ ಬನೂ ಖುನ್‌ಖಾಅ್‌ದವರಿಗೆ ಗಡಿಪಾರು ಮಾಡಲಾಗಿತ್ತು. ಅದರ ವಿವರಣೆ ಹೀಗಿದೆ. ಈ ಯಹೂದಿ ಗೋತ್ರದ ಕೋರಿಕೆಯ ಮೇರೆಗೆ ಅವರನ್ನು ಗಡಿಪಾರು ಮಾಡಲು ನಿರ್ಧರಿಸಲಾಯಿತು ಮತ್ತು ಯಹೂದಿಗಳನ್ನು ಮದೀನಾದಿಂದ ಗಡೀಪಾರು ಮಾಡುವ ಜವಾಬ್ದಾರಿಯನ್ನು ಹಝ್ರತ್ ಉಬಾದಾ ಬಿನ್ ಸಾಮಿತ್(ರ) ರವರಿಗೆ ವಹಿಸಲಾಯಿತು ಮತ್ತು ಮೂರು ದಿನಗಳಲ್ಲಿ ಮದೀನಾವನ್ನು ತೊರೆಯಲು ಗಡುವು ನೀಡಿದರು. ಆದ್ದರಿಂದ ಅವರು ಮೂರು ದಿನಗಳಲ್ಲಿ ಮದೀನಾವನ್ನು ತೊರೆದರು. ಯಹೂದಿಗಳು ಉಬಾದಾ(ರ) ಅವರಿಗೆ ಹೆಚ್ಚಿನ ಸಮಯ ಕೇಳಿದರು, ಆದರೆ ಅವರು ಒಂದು ಗಂಟೆ ಹೆಚ್ಚು ಸಮಯವನ್ನು ನೀಡದೆ ತನ್ನ ಮೇಲ್ವಿಚಾರಣೆಯಲ್ಲಿ ಅವರನ್ನು ಗಡಿಪಾರು ಮಾಡಿದರು ಎಂಬುದು ಒಂದು ಮಾತು. ಈ ಜನರು ಇಲ್ಲಿಂದ ಹೊರಟು ಸೀರಿಯಾದ ಕಡೆಗೆ ಇರುವ ಅಜ್ರಿಯಾತ್ ಪ್ರದೇಶಕ್ಕೆ ಹೋದರು. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ(ರ) ಅವರನ್ನು ಗಡಿಪಾರು ಮಾಡಲು ನಿಯೋಜಿಸಲಾಗಿದೆ ಎಂಬ ಒಂದು ವರದಿಯೂ ಲಭಿಸಿದೆ. ಈ ಜವಾಬ್ದಾರಿಯನ್ನು ಇಬ್ಬರಿಗೂ ವಹಿಸಿರುವ ಸಾಧ್ಯತೆಯೂ ಇದೆ.

ಆದಾಗ್ಯೂ, ಆ ಜನರು ಹೊರಟುಹೋದಾಗ, ಯಹೂದಿಗಳ ಮನೆಗಳಲ್ಲಿ ಬಹಳಷ್ಟು ಶಸ್ತ್ರಾಸ್ತ್ರಗಳು ಕಂಡುಬಂದವು, ಏಕೆಂದರೆ ಅವರು ಇತರ ಯಹೂದಿಗಳಲ್ಲಿ ಅತ್ಯಂತ ಶ್ರೀಮಂತ ಮತ್ತು ಅತ್ಯಂತ ಧೈರ್ಯಶಾಲಿ ಮತ್ತು ಯುದ್ಧೋಚಿತ ಜನರಾಗಿದ್ದರು. ಹಝ್ರತ್ ಪೈಗಂಬರ್(ಸ) ಅವರು ತಮ್ಮ ಆಯುಧಗಳಿಂದ ಮೂರು ಬಿಲ್ಲುಗಳು, ಎರಡು ರಕ್ಷಾಕವಚಗಳು, ಮೂರು ಕತ್ತಿಗಳು ಮತ್ತು ಮೂರು ಈಟಿಗಳನ್ನು ಆರಿಸಿಕೊಂಡರು. ಬಿಲ್ಲುಗಳ ಹೆಸರುಗಳು ಕತೂಮ್, ರುಹಾ ಮತ್ತು ಬೈಝಾ ಎಂದಾಗಿತ್ತು. ಉಹುದ್‌ನಲ್ಲಿ ಕತುಮ್ ಮುರಿಯಿತು. ಎರಡು ರಕ್ಷಾಕವಚಗಳು, ಅವುಗಳ ಹೆಸರುಗಳು ಸಗ್ದಿಯಾ ಮತ್ತು ಫಿಜ್ಜಾ. ಅದೇ ರೀತಿ ಮೂರು ಈಟಿಗಳು ಮತ್ತು ಮೂರು ಕತ್ತಿಗಳನ್ನು ಆಯ್ಕೆಮಾಡಿದರು. ಒಂದು ಖಡ್ಗವನ್ನು ಕಲಾಯಿ ಎಂದು ಕರೆಯಲಾಗುತ್ತಿತ್ತು ಮತ್ತು ಇನ್ನೊಂದನ್ನು ಬತ್ತಾರ್ ಎಂದು ಕರೆಯಲಾಗುತ್ತಿತ್ತು. ಮೂರನೆಗೆ ಹೆಸರಿರಲಿಲ್ಲ. ಇದು ಸೀರತ್ ಅಲ್–ಹಲ್ಬಿಯಾದ ವರದಿಯಾಗಿದೆ. (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–287, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಮುಜಮುಲ್ ಬಲದಾನ್, ಸಂಪುಟ–1, ಪುಟ–165, ಅಲ್‌ಮಕ್ತಬತುಲ್ ಅಸರೀಯ)

ಬನೂ ಖೈನ್‌ಖಾಅ್‌ದ ಯುದ್ಧದ ಬಗ್ಗೆ ಸೀರತ್ ಖಾತಮುನ್ನಬೀಈನ್‌ನಲ್ಲಿ ಹೀಗೆ ಉಲ್ಲೇಖಿಸಲಾಗಿದೆ: ಹಝ್ರತ್ ಪೈಗಂಬರ್(ಸ) ಅವರು ಮಕ್ಕಾದಿಂದ ಹಿಜ್ರತ್ ಮಾಡಿ ಮದೀನಾಗೆ ಆಗಮಿಸಿದಾಗ, ಮದೀನಾದಲ್ಲಿ ಮೂರು ಯಹೂದಿಗಳ ಗೋತ್ರಗಳು ವಾಸಿಸುತ್ತಿದ್ದರು. ಅವರ ಹೆಸರುಗಳು ಬನೂ ಖೈನ್‌ಖಾಅ್, ಬನೂ ನಝೀರ್ ಮತ್ತು ಬನುಖುರೈಝಾ. ಹಝ್ರತ್ ಪೈಗಂಬರ್(ಸ) ಅವರು ಮದೀನಾಗೆ ಬಂದ ತಕ್ಷಣ, ಅವರು ಈ ಗೋತ್ರಗಳೊಂದಿಗೆ ಶಾಂತಿ ಒಪ್ಪಂದಗಳನ್ನು ಮಾಡಿಕೊಂಡರು ಮತ್ತು ತಮ್ಮ ನಡುವೆ ಶಾಂತಿ ಮತ್ತು ಸಾಮರಸ್ಯದಿಂದ ಬದುಕಲು ಅಡಿಪಾಯ ಹಾಕಿದರು. ಒಪ್ಪಂದದ ಪ್ರಕಾರ, ಮದೀನಾದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಪಕ್ಷಗಳು ಹೊಂದಿದ್ದವು ಮತ್ತು ಯಾವುದೇ ಬಾಹ್ಯ ಶತ್ರುಗಳು ಮದೀನಾದ ಮೇಲೆ ದಾಳಿ ಮಾಡಿದರೆ, ಅವರು ಒಟ್ಟಾಗಿ ಹೋರಾಡುತ್ತಾರೆ ಎಂದಾಗಿತ್ತು. ಆರಂಭದಲ್ಲಿ, ಯಹೂದಿಗಳು ಈ ಒಪ್ಪಂದಕ್ಕೆ ಬದ್ಧರಾಗಿದ್ದರು ಮತ್ತು ಕನಿಷ್ಠ ಬಾಹ್ಯವಾಗಿ ಮುಸ್ಲಿಮರೊಂದಿಗೆ ಯಾವುದೇ ಸಂಘರ್ಷವನ್ನು ಸೃಷ್ಟಿಸಲಿಲ್ಲ, ಆದರೆ ಅವರು ಮದೀನಾದಲ್ಲಿ ಮುಸ್ಲಿಮರು ಹೆಚ್ಚು ಅಧಿಕಾರವನ್ನು ಪಡೆಯುತ್ತಿರುವುದನ್ನು ಕಂಡಾಗ, ಅಧಿಕಾರದ ಅಲೆಯು ಬದಲಾಗಲಾರಂಭಿಸಿತು ಮತ್ತು ಅವರು ಮುಸ್ಲಿಮರನ್ನು ವಿರೋಧಿಸಲು ಪ್ರಾರಂಭಿಸಿದರು. ಅವರು ಬೆಳೆಯುತ್ತಿರುವ ಈ ಶಕ್ತಿಯನ್ನು ತಡೆಯಲು ನಿರ್ಧರಿಸಿದರು ಮತ್ತು ಈ ಉದ್ದೇಶಕ್ಕಾಗಿ ಅವರು ಎಲ್ಲಾ ರೀತಿಯ ಕಾನೂನುಬದ್ಧ ಮತ್ತು ಕಾನೂನುಬಾಹಿರ ಕ್ರಮಗಳನ್ನು ತೆಗೆದುಕೊಳ್ಳಲು ಪ್ರಾರಂಭಿಸಿದರು. ಮುಸ್ಲಿಮರೊಳಗೆ ಒಡಕು ಮೂಡಿಸುವ ಮೂಲಕ ಅಂತರ್ಯುದ್ಧವನ್ನು ಪ್ರಾರಂಭಿಸಲು ಪ್ರಯತ್ನಿಸಲು ಅವರು ಹಿಂಜರಿಯಲಿಲ್ಲ. ಆದ್ದರಿಂದ, ಒಂದು ಸಂದರ್ಭದಲ್ಲಿ, ಔಸ್ ಮತ್ತು ಖಝ್ರಜ್ ಗೋತ್ರದ ಅನೇಕ ಜನರು ಒಟ್ಟಿಗೆ ಕುಳಿತು ಪರಸ್ಪರ ಪ್ರೀತಿ ಮತ್ತು ಒಪ್ಪಂದದಿಂದ ಮಾತನಾಡುತ್ತಿದ್ದರು, ಕೆಲವು ಪುಂಡ ಯಹೂದಿಗಳು ಈ ಸಭೆಯನ್ನು ತಲುಪಿದರು ಮತ್ತು ಬುಆಸ್ ಯುದ್ಧವನ್ನು ಪ್ರಸ್ತಾಪಿಸಲು ಪ್ರಾರಂಭಿಸಿದರು ಎಂದು ವರದಿಯಾಗಿದೆ. ಹಿಜ್ರತ್ ಮಾಡುವ ಕೆಲವು ವರ್ಷಗಳ ಮುಂಚೆ ಎರಡು ಬುಡಕಟ್ಟು ಜನಾಂಗದವರ ನಡುವೆ ನಡೆದ ಅಪಾಯಕಾರಿ ಯುದ್ಧ ಇದಾಗಿದ್ದು, ಇದರಲ್ಲಿ ಔಸ್ ಮತ್ತು ಖಝ್ರಜ್‌ನ ಅನೇಕ ಜನರು ಪರಸ್ಪರರ ಕೈಯಿಂದ ಕೊಲ್ಲಲ್ಪಟ್ಟರು. ಇದನ್ನು ಹೇಳಿದ ತಕ್ಷಣ, ಕೆಲವರ ಮನಸ್ಸಿನಲ್ಲಿ ಹಳೆಯ ನೆನಪುಗಳು ಮರುಕಳಿಸಿದವು. ಉತ್ಸಾಹಿ ಜನರು ಮತ್ತು ಹಿಂದಿನ ದ್ವೇಷದ ದೃಶ್ಯಗಳು ಅವರ ಕಣ್ಣುಗಳ ಮುಂದೆ ಮರಳಿದವು. ಪರಿಣಾಮವಾಗಿ ಪರಸ್ಪರ ನಿಂದೆ, ತೆಗಳಿಕೆ, ನಿಂದೆಗಳನ್ನು ದಾಟಿ ಅದೇ ಸಭೆಯಲ್ಲಿ ಮುಸಲ್ಮಾನರ ನಡುವೆಯೇ ಕತ್ತಿ ಮಸೆಯುವ ಹಂತಕ್ಕೆ ಪರಿಸ್ಥಿತಿ ತಲುಪಿತು ಆದರೆ ಅದೃಷ್ಟವಶಾತ್ ಹಝ್ರತ್ ಪೈಗಂಬರ್(ಸ.ಅ) ಅವರಿಗೆ ಸಕಾಲದಲ್ಲಿ ತಿಳಿಸಲಾಯಿತು. ಅವರು ಮುಹಾಜಿರ್‌ರ ಒಂದು ಗುಂಪಿನೊಂದಿಗೆ ತಕ್ಷಣವೇ ಹೊರಟುಹೋದರು, ಅವರು ಎಲ್ಲರನ್ನೂ ಬಹಳ ಬುದ್ಧಿವಂತಿಕೆಯಿಂದ ಸಂಬೋಧಿಸಿ ಹೇಳಿದರು: ಅಲ್ಲಾಹ್! ಅಲ್ಲಾಹ್! ನಾನಿರುವಾಗ ಅಜ್ಞಾನದ ಕರೆ? ಅದೂ ಸರ್ವಶಕ್ತನಾದ ಅಲ್ಲಾಹನು ನಿಮಗೆ ಇಸ್ಲಾಮಿನ ಮಾರ್ಗದರ್ಶನವನ್ನು ಅನುಗ್ರಹಿಸಿದ ನಂತರ. ಅದರಿಂದ ನಿಮಗೆ ಗೌರವ ಲಭಿಸಿದೆ. ಅಜ್ಞಾನದ ಪರಿಣಾಮಗಳು ನಿಮ್ಮಿಂದ ದೂರಗೊಳಿಸಲಾಗಿತ್ತು. ಆತನು ನಿಮ್ಮನ್ನು ಅವಿಶ್ವಾಸದಿಂದ ಮುಕ್ತಗೊಳಿಸಿದ್ದಾನೆ ಮತ್ತು ನಿಮ್ಮ ಮನಸ್ಸಿನಲ್ಲಿ ಪ್ರೀತಿ ಮತ್ತು ವಾತ್ಸಲ್ಯವನ್ನು ಇರಿಸಿದ್ದಾನೆ. ಈ ವಿಷಯಗಳ ಹೊರತಾಗಿಯೂ, ನೀವು ಈಗ ಈ ಅಜ್ಞಾನವನ್ನು ಮಾಡುತ್ತಿದ್ದೀರಿ. ಹಝ್ರತ್ ಪೈಗಂಬರ್(ಸ) ಅವರ ಈ ಸಂಭಾಷಣೆಯು ಅವರ ಮೇಲೆ ಎಷ್ಟು ಪ್ರಭಾವ ಬೀರಿತು ಎಂದರೆ ಅವರು ತಮ್ಮ ಕಾರ್ಯಗಳಿಗೆ ತೀವ್ರ ವಿಷಾದ ವ್ಯಕ್ತಪಡಿಸಿ ಅಳಲು ಪ್ರಾರಂಭಿಸಿದರು. ಪರಸ್ಪರ ಜಗಳವಾಡಲು ನೆರೆದಿದ್ದ ಔಸ್ ಮತ್ತು ಖಝ್ರಜ್ ಜನರು ಪರಸ್ಪರ ಅಪ್ಪಿಕೊಂಡರು. ನಂತರ ಅವರು ಗಹಝ್ರತ್ ಪೈಗಂಬರ್(ಸ) ಅವರಿಗೆ ವಿಧೇಯತೆಯನ್ನು ತೋರಿಸಿದರು.

ಬದ್ರ್ ಯುದ್ಧವು ಮುಗಿದಾಗ ಮತ್ತು ಅಲ್ಲಾಹನು ತನ್ನ ಅನುಗ್ರಹದಿಂದ ಮುಸ್ಲಿಮರಿಗೆ ಅವರ ದೌರ್ಬಲ್ಯತೆ ಮತ್ತು ಅವ್ಯವಸ್ಥೆಯ ನಡುವೆಯೂ ಖುರೈಷಿಗಳ ದೊಡ್ಡ ಸೈನ್ಯದ ಮೇಲೆ ಗಮನಾರ್ಹ ವಿಜಯವನ್ನು ನೀಡಿದನು ಮತ್ತು ಮಕ್ಕಾದ ಮಹಾನ್ ನಾಯಕರು ಯಹೂದಿಗಳ ಅಸೂಯೆಗೆ ಕಾರಣರಾದರು ಮದೀನಾ ಭುಗಿಲೆದ್ದಿತು ಮತ್ತು ಅವರು ಮುಸ್ಲಿಮರೊಂದಿಗೆ ಬಹಿರಂಗವಾಗಿ ಜಗಳವಾಡಲು ಪ್ರಾರಂಭಿಸಿದರು ಮತ್ತು ಖುರೈಷಿಗಳ ಸೈನ್ಯವನ್ನು ಸೋಲಿಸುವುದು ದೊಡ್ಡ ವಿಷಯವಲ್ಲ ನಮ್ಮೊಂದಿಗೆ ಯುದ್ಧವಾಡಬೇಕು ಎಂದು ಸಭೆಗಳಲ್ಲಿ ಬಹಿರಂಗವಾಗಿ ಹೇಳಲು ಪ್ರಾರಂಭಿಸಿದರು. ಸಭೆಯೊಂದರಲ್ಲಿಯೂ ಅವರೇ ಹಝ್ರತ್ ಪೈಗಂಬರ್(ಸ)ರ ಮುಖದ ಮೇಲೆ ಅದೇ ರೀತಿಯ ಮಾತುಗಳನ್ನು ಹೇಳಿದರು. ಹೀಗಾಗಿ, ಬದ್ರ್ ಯುದ್ಧದ ನಂತರ, ಹಝ್ರತ್ ಪೈಗಂಬರ್(ಸ) ಅವರು ಮದೀನಾಗೆ ಬಂದಾಗ, ಒಂದು ದಿನ ಅವರು ಯಹೂದಿಗಳನ್ನು ಒಟ್ಟುಗೂಡಿಸಿ ಅವರಿಗೆ ಸಲಹೆ ನೀಡಿದರು ಮತ್ತು ತಮ್ಮ ವಾದವನ್ನು ಮಂಡಿಸಿ ಅವರನ್ನು ಇಸ್ಲಾಂಗೆ ಆಹ್ವಾನಿಸಿದರು ಎಂದು ನಿರೂಪಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಅವರ ಈ ಶಾಂತಿಯುತ ಮತ್ತು ಸಹಾನುಭೂತಿಯ ಭಾಷಣಕ್ಕೆ ಯಹೂದಿಗಳ ನಾಯಕರು ಈ ಮಾತುಗಳಲ್ಲಿ ಪ್ರತಿಕ್ರಿಯಿಸಿದರು: "ಓ ಮುಹಮ್ಮದ್! (ಸಲ್ಲಲ್ಲಾಹು ಅಲೈಹಿವ ಸಲ್ಲಮ್) ನೀವು ಕೆಲವು ಖುರೈಷಿಗಳನ್ನು ಕೊಲ್ಲುವ ಮೂಲಕ ಸೊಕ್ಕಿಗೆ ಒಳಗಾಗಿಗರಬಹುದು. ಆ ಜನರಿಗೆ ಹೋರಾಟದ ಕಲೆಯ ಅರಿವಿರಲಿಲ್ಲ. ನೀವು ನಮ್ಮೊಂದಿಗೆ ಯುದ್ಧವಾಡಿದರೆ, ಹೋರಾಟಗಾರರು ಹೇಗಿರುತ್ತಾರೆ ಎಂದು ನಿಮಗೆ ತಿಳಿಯುತ್ತದೆ." ಯಹೂದಿಯರು ಕೇವಲ ಸಾಮಾನ್ಯ ಬೆದರಿಕೆಗಳಿಗೆ ಸೀಮಿತವಾಗಿರಲಿಲ್ಲ ಬದಲಿಗೆ ಅವರು ಹಝ್ರತ್ ಪೈಗಂಬರ್(ಸ) ಅವರಿಗೆ ವಧಿಸಲು ಯೋಜನೆಗಳನ್ನು ಸಹ ರೂಪಿಸಿದ್ದಿರಬಹುದು ಎಂದು ಕಾಣುತ್ತದೆ ಏಕೆಂದರೆ ಒಂದು ವರದಿಯ ಒಕಾರ ಆ ದಿನಗಳಲ್ಲಿ ಪ್ರಾಮಾಣಿಕ ಸಹಾಬಿಯಾಗಿದ್ದ ತಲ್ಹಾ ಬಿನ್ ಬರಾ(ರ) ಅವರು ಮರಣಹೊಂದಿದಾಗ ಅವರು ಉಯಿಲು ಮಾಡಿದರು. ಅದೇನೆಂದರೆ ನಾನು ರಾತ್ರಿಯಲ್ಲಿ ಮರಣಹೊಂದಿದರೆ, ಹಝ್ರತ್ ಪೈಗಂಬರ್(ಸ) ಜನಾಝ ನಮಾಝ್‌ಗಾಗಿ ತಿಳಿಸಬೇಡಿ, ಏಕೆಂದರೆ ನನ್ನಿಂದಾಗಿ ಯಹೂದಿಯರಿಂದ ಹಝ್ರತ್ ಪೈಗಂಬರ್(ಸ) ಅವರಿಗೆ ಅಪಘಾತ ಸಂಭವಿಸದಿರಲಿ. ಬದ್ರ್ ಕದನದ ನಂತರ, ಯಹೂದಿಗಳು ಬಹಿರಂಗವಾಗಿ ಕಿಡಿಗೇಡಿತನವನ್ನು ಪ್ರಾರಂಭಿಸಿದರು ಮತ್ತು ಮದೀನಾದ ಯಹೂದಿಗಳಲ್ಲಿ ಬನೂ ಖೈನ್‌ಖಾಅ್ ಅತ್ಯಂತ ಶಕ್ತಿಶಾಲಿ ಮತ್ತು ಧೈರ್ಯಶಾಲಿಯಾಗಿರುವುದರಿಂದ, ಅವರು ಒಪ್ಪಂದವನ್ನು ಮುರಿಯಲು ಮೊದಲಿಗರಾಗಿದ್ದರು. ಆದ್ದರಿಂದ ಇತಿಹಾಸಕಾರರು ಹೀಗೆ ಬರೆಯುತ್ತಾರೆ

...

ಮದೀನಾದ ಯಹೂದಿಗಳಲ್ಲಿ ಮೊತ್ತಮೊದಲು ಬನೂ ಖೈನ್‌ಖಾಅ್‌ದವರು ಅವರ ಮತ್ತು ಹಝ್ರತ್ ಪೈಗಂಬರ್(ಸ) ಅವರ ನಡುವಿನ ಒಪ್ಪಂದವನ್ನು ಮುರಿದರು. ಮತ್ತು ಬದ್ರ್ ನಂತರ ಅವರು ತುಂಬಾ ಬಂಡಾಯವೆದ್ದರು ಮತ್ತು ಬಹಿರಂಗವಾಗಿ ದುರುದ್ದೇಶ ಮತ್ತು ಅಸೂಯೆ ವ್ಯಕ್ತಪಡಿಸಿ ಪ್ರತಿಜ್ಞೆಯನ್ನು ಮುರಿದರು.

ಆದರೆ ಈ ರೀತಿಯ ವಿಷಯಗಳ ಹೊರತಾಗಿಯೂ, ಮುಸ್ಲಿಮರು ತಮ್ಮ ಯಜಮಾನನ ಮಾರ್ಗದರ್ಶನದಲ್ಲಿ ತಾಳ್ಮೆಯಿಂದ ವರ್ತಿಸಿದರು ಮತ್ತು ಅವರ ಕಡೆಯಿಂದ ಯಾವುದೇ ರೀತಿಯ ಅವಕಾಶ ನೀಡಲಿಲ್ಲ. ಆದರೆ ಹದೀಸಿನಲ್ಲಿ ಈ ಒಪ್ಪಂದದ ನಂತರ ಹಝ್ರತ್ ಪೈಗಂಬರ್(ಸ) ಅವರು ಯಹೂದಿಯರ ಔದಾರ್ಯದ ಬಗ್ಗೆ ವಿಶೇಷವಾಗಿ ಕಾಳಜಿ ವಹಿಸಿದ್ದರು ಎಂದು ವರದಿಯಾಗಿದೆ.

ಅವರ ಕಡೆಯಿಂದ ವೈರತ್ವದ ಮನೋಭಾವ ಇತ್ತು ಮತ್ತು ಹಝ್ರತ್ ಪೈಗಂಬರ್(ಸ) ಅವರ ಕಡೆಯಿಂದ ಸಾಂತ್ವನದ ಮನೋಭಾವವಿತ್ತು. “ಹೀಗೆ ಒಮ್ಮೆ ಓರ್ವ ಮುಸ್ಲಿಮ್ ಹಾಗೂ ಯಹೂದಿಯರಲ್ಲಿ ಭಿನ್ನಾಭಿಪ್ರಾಯವಾಯಿತು. ಎಲ್ಲಾ ಪ್ರವಾದಿಗಳಿಗಿಂತ ಪ್ರವಾದಿ ಮೋಸೆಸ್ ಅವರ ಶ್ರೇಷ್ಠತೆಯನ್ನು ಯಹೂದಿ ವಿವರಿಸಿದರು. ಆ ಸಹಾಬಿಯು ಅವನ ಮೇಲೆ ಕೋಪಗೊಂಡರು ಮತ್ತು ಅವರು ಯಹೂದಿಯೊಂದಿಗೆ ಸ್ವಲ್ಪ ಕಠೋರವಾಗಿ ವರ್ತಿಸಿದರು ಮತ್ತು ಹಝ್ರತ್ ಪೈಗಂಬರ್(ಸ) ಅವರನ್ನು ಅತ್ಯುತ್ತಮ ಸಂದೇಶವಾಹಕ ಎಂದು ಬಣ್ಣಿಸಿದರು. ಈ ಘಟನೆಯ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿಸಿದಾಗ, ಅವರು (ಸ) ಕೋಪಗೊಂಡರು ಮತ್ತು ಈ ಸಹಾಬಿಯನ್ನು ಖಂಡಿಸಿದರು ಮತ್ತು ಹೇಳಿದರು, “ಪ್ರತಿಯೊಂದಕ್ಕೂ ದೇವರ ಸಂದೇಶವಾಹಕರನ್ನು ಹೊಗಳುವುದು ನಿಮ್ಮ ಕೆಲಸವಲ್ಲ.” ಅವರು ಈ ಯಹೂದಿಯನ್ನು ಆಂಶಿಕ ಸದ್ಗುಣವನ್ನು ವಿವರಿಸುವ ಮೂಲಕ ಸಾಂತ್ವನ ಹೇಳಿದರು, ಆದರೆ ಈ ರೀತಿಯ ಉಪಚಾರದ ಹೊರತಾಗಿಯೂ, ಯಹೂದಿಗಳು ತಮ್ಮ ದುಷ್ಟತನದಲ್ಲಿ ಪ್ರಗತಿಯನ್ನು ಮುಂದುವರೆಸಿದರು, ಮತ್ತು ಅಂತಿಮವಾಗಿ ಯುದ್ಧದ ಕಾರಣವು ಯಹೂದಿಗಳಿಂದಲೇ ಹುಟ್ಟಿಕೊಂಡಿತು ಮತ್ತು ಅವರ ಹೃದಯದ ದ್ವೇಷವು ಅವರ ಮನಸ್ಸಿನಲ್ಲಿ ಉಳಿದಿರಲಿಲ್ಲ. ಅದು ಬೆಳೆದು ಒಂದು ಮುಸ್ಲಿಂ ಮಹಿಳೆ ಕೆಲವು ವಸ್ತುಗಳನ್ನು ಖರೀದಿಸಲು ಬಜಾರ್‌ನಲ್ಲಿರುವ ಯಹೂದಿ ಅಂಗಡಿಗೆ ಹೋದಳು, ಇದರ ಬಗ್ಗೆ ಈಗಾಗಲೆ ಪ್ರಸ್ತಾಪಿಸಲಾಗಿದೆ. “ಕೆಲವು ಯಹೂದಿ ಪುಂಡರು ಅವಳಿಗೆ ತನ್ನ ಮುಖವನ್ನು ತೋರಿಸಲು ಒತ್ತಾಯಿಸಿದರು ಆದರೆ ಆಕೆಯು ಹಾಗೆ ಮಾಡಲು ನಿರಾಕರಿಸಿದಳು. ಅಕ್ಕಸಾಲಿಗ ಸ್ವತಃ ಅಂಗಡಿಯವನು ಎದ್ದು ಅವಳ ಮುಸುಕಿನ ಒಂದು ಮೂಲೆಯನ್ನು ರಹಸ್ಯವಾಗಿ ಅವಳ ಬೆನ್ನ ಹಿಂದೆ ಯಾವುದೋ ಒಂದು ವಸ್ತುವಿಗೆ ಕಟ್ಟಿದನು ಅಥವಾ ಒಂದು ವರದಿಯ ಪ್ರಕಾರ ಅವನು ಮೌನವಾಗಿ ಅವಳ ಮೇಲಂಗಿಯ ಒಂದು ತುದಿಯನ್ನು ಕೊಕ್ಕೆ ಅಥವಾ ಮೊಳೆಗೆ ಸಿಕ್ಕಿಸಿದನು. ಮಹಿಳೆಗೆ ಇದು ತಿಳಿದಿರಲಿಲ್ಲ. ಮಹಿಳೆ ಹೊರಡಲು ಎದ್ದು ನಿಂತಾಗ ಬಟ್ಟೆ ಸಿಕ್ಕಿಕೊಂಡು ಆಕೆಯ ಬಟ್ಟೆ ಕಳಚಿ ಹೋಯಿತು ಹೀಗೆ ಆಕೆಯ ಗುಪ್ತಾಂಗಗಳು ಬಹಿರಂಗವಾದವು. ಯಹೂದಿಗಳು ಇದನ್ನು ಕಂಡು ನಕ್ಕರು. ಮಹಿಳೆ ಅವರ ಅಸಂಬದ್ಧತೆಯನ್ನು ಕಂಡು ಕಿರುಚಾಡಲು ಪ್ರಾರಂಭಿಸಿದರು. ಅಲ್ಲಿಂದ ಓರ್ವ ಮುಸಲ್ಮಾನನು ಹಾದುಹೋಗುತ್ತಿದ್ದನು, ಅವನು ಯಹೂದಿಗಳ ದುಷ್ಟತನವನ್ನು ನೋಡಿದ ತಕ್ಷಣ, ಅವನು ಯಹೂದಿ ಅಕ್ಕಸಾಲಿಗನ ಕಡೆಗೆ ಧಾವಿಸಿ ಅವನನ್ನು ಕತ್ತಿಯಿಂದ ಕೊಂದನು. ಇದನ್ನು ನೋಡಿದ ಯಹೂದಿಗಳು ಈ ಮುಸಲ್ಮಾನನ ಮೇಲೆ ದಾಳಿ ಮಾಡಿ ಆತನನ್ನು ಕೊಂದುಹಾಕಿದರು. ಈ ಘಟನೆಯ ನಂತರ, ಬನೂ ಖೈನ್‌ಖಾಅ್‌ದ ಯಹೂದಿಗಳ ವಿರುದ್ಧ ಮುಸ್ಲಿಮರಲ್ಲಿ ದೊಡ್ಡ ಕೋಪವಿತ್ತು. ಮತ್ತೊಂದೆಡೆ, ಈ ಘಟನೆಯನ್ನು ಯುದ್ಧಕ್ಕೆ ಬಳಸಿಕೊಳ್ಳಲು ಬಯಸಿದ ಯಹೂದಿಗಳು ಗುಂಪು ಗುಂಪಾಗಿ ಜಮಾಯಿಸಿದರು ಮತ್ತು ಗಲಭೆ ನಡೆಸಿದರು. ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿಸಿದಾಗ, ಅವರು ಬನೂಖೈನ್‌ಖಾಅ್‌ದ ಮುಖ್ಯಸ್ಥರನ್ನು ಒಟ್ಟುಗೂಡಿಸಿ ಈ ವಿಧಾನವು ಒಳ್ಳೆಯದಲ್ಲ ಎಂದು ಹೇಳಿದರು. ನೋಡಿ ಹಝ್ರತ್ ಪೈಗಂಬರ್(ಸ) ಅವರ ವಿಧಾನ. ಈ ವಿಷಯವನ್ನು ಹೇಗಾದರೂ ತಣ್ಣಗಾಗಿಸಲು ಅವರು ಹೇಗೆ ಪ್ರಯತ್ನಿಸಿದರು. ವಿಷಾದ ವ್ಯಕ್ತಪಡಿಸುವ ಮತ್ತು ಕ್ಷಮೆ ಕೋರುವ ಬದಲು, ಅವರು ಮುಂಭಾಗದಿಂದ ಬಹಳ ಬಂಡಾಯದ ಉತ್ತರವನ್ನು ನೀಡಿದರು. ನಮ್ಮ ಜೊತೆ ಯುದ್ಧ ಆದಾಗ ಹೋರಾಟಗಾರರು ಹೇಗಿದ್ದಾರೆ ಎಂಬುದು ಗೊತ್ತಾಗುತ್ತದೆ ಎಂದರು. ದುರದೃಷ್ಟವಶಾತ್, ಅವರು(ಸ) ತಮ್ಮೊಂದಿಗೆ ಸಹಚರರ ಗುಂಪನ್ನು ಕರೆದುಕೊಂಡು ಬನೂ ಖೈನ್‌ಖಾಅ್‌ದ ಕೋಟೆಗಳಿಗೆ ಹೊರಟರು. ಈಗ ಅವರು (ಯಹೂದಿಗಳು) ತಮ್ಮ ಕಾರ್ಯಗಳಿಗೆ ಪಶ್ಚಾತ್ತಾಪ ಪಡುವ ಕೊನೆಯ ಅವಕಾಶವಾಗಿತ್ತು. ಆದರೆ ಅವರು ಮುಂಭಾಗದಿಂದ ಹೋರಾಡಲು ಸಿದ್ಧರಾಗಿದ್ದರು. ಆದ್ದರಿಂದ ಯುದ್ಧವನ್ನು ಘೋಷಿಸಲಾಯಿತು ಮತ್ತು ಇಸ್ಲಾಂ ಮತ್ತು ಯಹೂದಿಯರ ಶಕ್ತಿಗಳು ಪರಸ್ಪರ ವಿರುದ್ಧವಾಗಿ ಹೊರಬಂದವು. ಆಗಿನ ಸಂವಿಧಾನದ ಪ್ರಕಾರ, ಅವರು ತಮ್ಮ ತಮ್ಮ ಕೋಟೆಗಳಲ್ಲಿ ಸುರಕ್ಷಿತವಾಗಿ ಕುಳಿತುಕೊಳ್ಳುವುದು ಮತ್ತು ಎದುರಾಳಿಯವರು ಕೋಟೆಗಳನ್ನು ಮುತ್ತಿಗೆ ಹಾಕುವುದು ಮತ್ತು ಕಾಲಕಾಲಕ್ಕೆ ಪರಸ್ಪರ ದಾಳಿಗಳು ನಡೆಯುವುದು ಯುದ್ಧದ ವಿಧಾನಗಳಲ್ಲಿ ಒಂದಾಗಿತ್ತು. ಮುತ್ತಿಗೆ ಹಾಕುವ ಸೈನ್ಯವು ಸಹ ಕೋಟೆಯನ್ನು ವಶಪಡಿಸಿಕೊಳ್ಳುವಲ್ಲಿ ನಿರಾಶೆಗೊಂಡ ನಂತರ ಮುತ್ತಿಗೆಯನ್ನು ತೆಗೆದುಹಾಕುತ್ತಿತ್ತು ಮತ್ತು ಇದನ್ನು ಮುತ್ತಿಗೆ ಹಾಕಿದವರ ವಿಜಯವೆಂದು ಪರಿಗಣಿಸಲಾಗುತ್ತಿತ್ತು ಅಥವಾ ಮುತ್ತಿಗೆ ಹಾಕಿದವರು ಕೋಟೆಯ ದ್ವಾರವನ್ನು ತೆರೆದು ವಿಜಯಶಾಲಿಗಳಿಗೆ ಶರಣಾಗುತ್ತಿದ್ದರು. ಈ ಸಂದರ್ಭದಲ್ಲೂ ಬನೂ ಖಯನ್‌ಖಾಅ್‌ದ ಅದೇ ವಿಧಾನವನ್ನು ಅನುಸರಿಸಿ ತಮ್ಮ ಕೋಟೆಗಳಲ್ಲಿ ಅಡಗಿ ಕುಳಿತರು. ಹಝ್ರತ್ ಪೈಗಂಬರ್(ಸ) ಅವರನ್ನು ಮುತ್ತಿಗೆ ಹಾಕಿದರು ಮತ್ತು ಮುತ್ತಿಗೆ ಹದಿನೈದು ದಿನಗಳವರೆಗೆ ಮುಂದುವರೆಯಿತು. ಅಂತಿಮವಾಗಿ, ಬನೂ ಖಯನ್‌ಖಾಅ್‌ದ ಶಕ್ತಿ ಮತ್ತು ಹೆಮ್ಮೆ ಮುರಿದುಹೋದಾಗ, ಅವರು ಈ ಸ್ಥಿತಿಯಲ್ಲಿ ತಮ್ಮ ಕೋಟೆಗಳ ಬಾಗಿಲುಗಳನ್ನು ತೆರೆದರು. ಹೌದು, ಅವರ ಆಸ್ತಿ ಮುಸ್ಲಿಮರಿಗೆ ಸೇರುತ್ತದೆ, ಆದರೆ ಮುಸ್ಲಿಮರಿಗೆ ಅವರ ಜೀವನ ಮತ್ತು ಅವರ ಕುಟುಂಬದ ಮೇಲೆ ಯಾವುದೇ ಹಕ್ಕಿಲ್ಲ. ಹಝ್ರತ್ ಪೈಗಂಬರ್(ಸ) ಅವರು ಈ ಷರತ್ತನ್ನು ಒಪ್ಪಿಕೊಂಡರು, ಏಕೆಂದರೆ ಮೂಸಾವಿನ ಕಾನೂನಿನ ಪ್ರಕಾರ, ಈ ಎಲ್ಲಾ ಜನರು ಮರಣದಂಡನೆಗೆ ಗುರಿಯಾಗುತ್ತಾರೆ ಮತ್ತು ಒಪ್ಪಂದದ ಪ್ರಕಾರ, ಮೂಸವೀ ಷರಿಯತ್‌ನ ತೀರ್ಪು ಇವುಗಳ ಮೇಲೆ ಅಂಗೀಕರಿಸಬೇಕಾಗುತ್ತದೆ. ಆದರೆ ಇದು ಈ ಸಮೂದಾಯದ ಮೊದಲ ಅಪರಾಧ ಮತ್ತು ಹಝ್ರತ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರ ಕರುಣಾಮಯಿ ಸ್ವಭಾವವು ತೀವ್ರವಾದ ಶಿಕ್ಷೆಯತ್ತ ಒಲವು ತೋರಲು ಸಾಧ್ಯವಿಲ್ಲ, ಇದು ಆರಂಭಿಕ ಹಂತದಲ್ಲಿ ಕೊನೆಯ ಉಪಾಯವಾಗಿದೆ. ಮತ್ತೊಂದೆಡೆ ಅಂತಹ ಕೆಟ್ಟ ಮತ್ತು ಪ್ರತಿಕೂಲ ಗೋತ್ರವನ್ನು ಮದೀನದಲ್ಲಿ ವಾಸಿಸುವುದು ‘ಆಸ್ತೀನ್ ಕಾ ಸಾಂಪ್’ ಪಾಲನೆಗಿಂತ ಕಡಿಮೆಯಿರಲಿಲ್ಲ. ಅದರಲ್ಲೂ ಔಸ್ ಮತ್ತು ಖಝ್ರಜ್ ಎಂಬ ಕಪಟ ಗುಂಪು ಮದೀನಾದಲ್ಲಿ ಈಗಾಗಲೇ ಇದ್ದಾಗ ಮತ್ತು ಹೊರಗಿನಿಂದ ಬಂದ ಎಲ್ಲಾ ಅರಬ್ಬರ ವಿರೋಧವೂ ಮುಸ್ಲಿಮರನ್ನು ಬೆರಗುಗೊಳಿಸಿತು. ಅಂತಹ ಸಂದರ್ಭಗಳಲ್ಲಿ, ಹಝ್ರತ್ ಪೈಗಂಬರ್(ಸ)ರ ನಿರ್ಧಾರವು ಬನೂ ಖೈನ್‌ಖಾಅ್ ಮದೀನಾವನ್ನು ತೊರೆದಿರಬಹುದು. ಅವರ ಅಪರಾಧಕ್ಕೆ ಹೋಲಿಸಿದರೆ ಮತ್ತು ಆ ಕಾಲದ ಪರಿಸ್ಥಿತಿಗಳನ್ನು ಪರಿಗಣಿಸಿದರೆ ಈ ಶಿಕ್ಷೆಯು ತುಂಬಾ ಸೌಮ್ಯವಾಗಿತ್ತು ಮತ್ತು ವಾಸ್ತವವಾಗಿ ಸ್ವಯಂ ರಕ್ಷಣೆಯ ಅಂಶವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿತ್ತು. ಇಲ್ಲವಾದರೆ, ಅಲೆಮಾರಿ ಸಮೂದಾಯಗಳಾದ ಅರೇಬಿಯಾಗಳಿಗೆ ವಲಸೆ ದೊಡ್ಡ ವಿಷಯವಾಗಿರಲಿಲ್ಲ. ವಿಶೇಷವಾಗಿ ಬುಡಕಟ್ಟಿನ ಆಸ್ತಿಗಳು, ಭೂಮಿ ಮತ್ತು ಉದ್ಯಾನಗಳ ರೂಪದಲ್ಲಿ ಇಲ್ಲದಿರುವಾಗ, ಬನೂ ಖೈನ್‌ಖಾಅ್‌ದಲ್ಲಿ ಇರಲಿಲ್ಲ. ಭೂಮಿಗಳು ಅಥವಾ ಅವುಗಳ ಮೇಲೆ ಅವಲಂಬಿತವಾಗಿರುವಂತಹ ಆಸ್ತಿಗಳು. "ತದನಂತರ ಇಡೀ ಗೋತ್ರವನ್ನು ಬಹಳ ಶಾಂತಿ ಮತ್ತು ಸಾಮರಸ್ಯದಿಂದ ಒಂದು ಭೂಮಿಯಿಂದ ಇನ್ನೊಂದಿ ಭೂಮಿಯಲ್ಲಿ ನೆಲೆಸುವ ಅವಕಾಶವನ್ನು ಪಡೆದರು. ಹೋಗೆ ಬನೂ ಖೈನ್‌ಖಾಅ್‌ದವರು ಬಹಳ ತೃಪ್ತಿಯಿಂದ ಮದೀನಾವನ್ನು ತೊರೆದು ಸೀರಿಯಾಗೆ ಹೋದರು. ಅವರ ನಿರ್ಗಮನದ ಬಗ್ಗೆ ಅಗತ್ಯ ವ್ಯವಸ್ಥೆಗಳು ಮತ್ತು ಮೇಲ್ವಿಚಾರಣೆಯ ಕೆಲಸವನ್ನು ಹಝ್ರತ್ ಪೈಗಂಬರ್(ಸ) ಅವರ ಮಿತ್ರರಲ್ಲಿ ಒಬ್ಬರಾಗಿದ್ದ ಅವರ ಸಹಾಬಿ ಉಬಾದಾ ಬಿನ್ ಸಾಮಿತ್(ರ) ಅವರಿಗೆ ವಹಿಸಲಾಯಿತು. ಆದ್ದರಿಂದ ಉಬಾದಾ ಬಿನ್ ಸಾಮಿತ್(ರ) ಕೆಲವು ಹಂತಗಳವರೆಗೆ ಬನೂ ಖಯನ್‌ಖಾ ಅವರೊಂದಿಗೆ ಹೋದರು ಮತ್ತು ನಂತರ ಅವರನ್ನು ಭದ್ರತೆಯೊಂದಿಗೆ ಮುಂದಕ್ಕೆ ಕಳುಹಿಸಿದರು ಮತ್ತು ಹಿಂತಿರುಗಿದರು. ಮುಸ್ಲಿಮರಿಗೆ ಲಭಿಸಿದ ಯುದ್ಧ ಸಂಪತ್ತಿನಲ್ಲಿ ಆಯುಧಗಳು ಮತ್ತು ವ್ಯಾಪಾರದ ಸಾಧನಗಳನ್ನು ಮಾತ್ರ ಒಳಗೊಂಡಿತ್ತು.

ಬನೂ ಖೈನ್‌ಖಾಅ್‌ದ ಬಗ್ಗೆ ಕೆಲವು ವರದಿಗಳಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: ಈ ಜನರು ತಮ್ಮ ಕೋಟೆಗಳ ದ್ವಾರಗಳನ್ನು ತೆರೆದು ಹಝ್ರತ್ ಪೈಗಂಬರ್(ಸ) ಅವರಿಗೆ ಶರಣಾದಾಗ, ಅವರು ಭುಗಿಲಿಸಿದ್ದ ದಂಗೆ ಮತ್ತು ಕಿಡಿಗೇಡಿತನದಿಂದಾಗಿ, ಹಝ್ರತ್ ಪೈಗಂಬರ್(ಸ) ಅವರ ಯೋಧರನ್ನು ವಧಿಸಲು ಉದ್ದೇಶಿಸಿದ್ದರು. ಆದರೆ ಅಬ್ದುಲ್ಲಾ ಬಿನ್ ಉಬೈ ಬಿನ್ ಸುಲೂಲ್‌ನ ಶಿಫಾರಸಿನ ಮೇರೆಗೆ ಅವರು ಈ ಉದ್ದೇಶವನ್ನು ತ್ಯಜಿಸಿದರು, ಆದರೆ ಸಂಶೋಧಕರು ಈ ವರದಿಗಳನ್ನು ಸರಿಯಾಗಿ ಸ್ವೀಕರಿಸಲಿಲ್ಲ ಏಕೆಂದರೆ ಇತರ ವರದಿಗಳಲ್ಲಿ ಇದನ್ನು ಸ್ಪಷ್ಟವಾಗಿ

ಉಲ್ಲೇಖಿಸಿದಾಗ ಅವರ ಮತ್ತು ಅವರ ಕುಟುಂಬಗಳ ಜೀವಗಳು ಉಳಿಯುತ್ತವೆ ಎಂಬ ಷರತ್ತಿನ ಮೇಲೆ ಬನೂ ಖಯನ್‌ಖಾದವರು ಬಾಗಿಲು ತೆರೆದರು, ಆದ್ದರಿಂದ ಈ ಷರತ್ತನ್ನು ಒಪ್ಪಿಕೊಂಡ ನಂತರ ಹಝ್ರತ್ ಪೈಗಂಬರ್(ಸ) ಅವರು ಮತ್ತೊಂದು ಮಾರ್ಗವನ್ನು ಅನುಸರಿಸಿ ಈ ಸ್ಥಿತಿಯನ್ನು ಮುರಿಯುವುದು ಎಂದಿಗೂ ಸಂಭವಿಸುವುದಿಲ್ಲ. ಜೀವ ಉಳಿಸುವಿಕೆಯ ಸ್ಥಿತಿಯು ಅವರ ನಿಜವಾದ ಶಿಕ್ಷೆ ಮರಣ ಎಂದು ಅವರು ನಂಬಿದ್ದರು ಎಂದು ತೋರಿಸುತ್ತದೆ, ಆದರೆ ಅವರು ಹಝ್ರತ್ ಪೈಗಂಬರ್(ಸ) ಅವರಿಂದ ಕರುಣೆಯನ್ನು ಕೇಳುತ್ತಿದ್ದರು ಮತ್ತು ಇದನ್ನು ತೆಗೆದುಕೊಂಡ ನಂತರ ಅವರ ಕೋಟೆಯ ದ್ವಾರವನ್ನು ತೆರೆಯಲು ಬಯಸಿದ್ದರು. ಅವರು ವಧೆ ಶಿಕ್ಷೆಗೆ ಒಳಗಾಗುವುದಿಲ್ಲ ಎಂದು ಭರವಸೆ ನೀಡಿದರು, ಆದರೆ ಹಝ್ರತ್ ಪೈಗಂಬರ್(ಸ) ಅವರ ಕರುಣೆಯಿಂದ ಅವರನ್ನು ಕ್ಷಮಿಸಿದ್ದರೂ ಸಹ, ಸರ್ವಶಕ್ತನಾದ ಅಲ್ಲಾಹನ ದೃಷ್ಟಿಯಲ್ಲಿ, ಈ ಜನರು ಅವರ ದುಷ್ಕೃತ್ಯಗಳು ಮತ್ತು ಅಪರಾಧಗಳಿಂದಾಗಿ ಪ್ರಪಂಚದ ಪರದೆಯ ಮೇಲೆ ಜೀವಂತವಾಗಿ ಉಳಿಸಲು ಸಾಧ್ಯವಿರಲಿಲ್ಲ. ಆದ್ದರಿಂದ, ಈ ಜನರು ಗಡಿಪಾರು ಹೋದ ಸ್ಥಳದಲ್ಲಿ, ಅವರು ಅನಾರೋಗ್ಯಕ್ಕೆ ಒಳಗಾಗಿ ಒಂದು ವರ್ಷವೂ ಕಳೆದಿಲ್ಲ ಮತ್ತು ಇಡೀ ಗೋತ್ರದವರು ಇದಕ್ಕೆ ಬಲಿಯಾದ ವರದಿಗಳು ಇವೆ.

ಬನೂ ಖೈನ್‌ಖಾಅ್ ಯುದ್ಧದ ಕಾಲದ ಕುರಿತು ಭಿನ್ನಾಭಿಪ್ರಾಯವಿದೆ. ಇದು ಹಿಜರೀ 2ರ ಶವ್ವಾಲ್ ತಿಂಗಳಲ್ಲಿ ನಡೆದಿತ್ತು ಎಂದು ವಾಖಿದಿ ಮತ್ತು ಇಬ್ನು ಸಅದ್ ಹೇಳುತ್ತಾರೆ. ಹಿಜರೀ 2ರ ಧಿಲ್‌ಹಜ್ಜ ತಿಂಗಳ ಆರಂಭದಲ್ಲಿ ನಡೆದ ಸವೀಕ್ ಯುದ್ಧದ ನಂತರ ಬನೂ ಖೈನ್‌ಖಾಅ್ ಯುದ್ಧ ನಡೆದಿತ್ತು ಎಂದು ಇಬ್ನು ಇಸ್‌ಹಾಖ್ ಮತ್ತು ಇಬ್ನು ಹಿಶಾಮ್ ಹೇಳುತ್ತಾರೆ. ಬನೂ ಖೈನ್‌ಖಾಅ್ ಯುದ್ಧವು ಹಝ್ರತ್ ಫಾತಿಮ(ರ)ರ ವಿವಾಹದ ನಂತರ ನಡೆದಿತ್ತು ಎಂದು ಹದೀಸ್‌ನ ಒಂದು ವರದಿಯಲ್ಲಿ ಸಹ ಸೂಚನೆಯಿದೆ.

... ಈ ಸಂದರ್ಭದಲ್ಲಿ, ಶ್ರೀ ಮಾರ್ಗುಲಿಸ್ ಅವರು ಬನೂ ಖೈನ್‌ಖಾಅ್ ಯುದ್ಧದ ಕಾರಣವನ್ನು ವಿವರಿಸುವಾಗ ಅವರ ಕಡೆಯಿಂದ ಆಶ್ಚರ್ಯ ಮತ್ತು ವಿಚಿತ್ರವಾದ ವಿಷಯವನ್ನು ಬರೆದಿದ್ದಾರೆ ಎಂದು ನಮೂದಿಸುವುದು ವ್ಯರ್ಥವಾಗುವುದಿಲ್ಲ, ಅದು ಖಂಡಿತವಾಗಿಯೂ ಯಾವುದೇ ವರದಿಯಲ್ಲಿ ಸುಳಿವು ಇಲ್ಲ. ಬುಖಾರಿಯಲ್ಲಿ ಹಝ್ರತ್ ಹಮ್ಜಾ(ರ) ಅವರು ಮದ್ಯದ ಅಮಲಿನಲ್ಲಿ (ಆ ಸಮಯದಲ್ಲಿ ಮದ್ಯವನ್ನು ನಿಷೇಧಿಸಿರಲಿಲ್ಲ) ಹಝ್ರತ್ ಅಲಿ(ರ) ಅವರು ಬದ್ರ್ ಯುದ್ಧದಲ್ಲಿ ಯುದ್ಧದ ಸಂಪತ್ತಿನಲ್ಲಿ ಪಡೆದ ಒಂಟೆಗಳನ್ನು ಕೊಂದರು ಎಂಬ ವರದಿ ಇದೆ. ಈ ವಿಶಿಷ್ಟ ಘಟನೆಯನ್ನು ಯಾವುದೇ ಐತಿಹಾಸಿಕ ಪುರಾವೆಗಳಿಲ್ಲದೆ ಬನೂ ಖೈನ್‌ಖಾಅ್ ಯುದ್ಧದೊಂದಿಗೆ ಸಂಪರ್ಕಿಸುವ ಮೂಲಕ, ಶ್ರೀ. ಮಾರ್ಗುಲಿಸ್ ಅವರು ಹಝ್ರತ್ ಅಲಿ(ರ) ಅವರ ನಷ್ಟವನ್ನು ಸರಿದೂಗಿಸಲು ಹಝ್ರತ್ ಪೈಗಂಬರ್(ಸ) ಬನೂ ಖೈನ್‌ಖಾಅ್ ಗೋತ್ರದ ಮೇಲೆ ದಾಳಿ ಮಾಡಿದರು ಎಂದು ಊಹಿಸುತ್ತಾರೆ. ಇತಿಹಾಸಶಾಸ್ತ್ರದಲ್ಲಿನ ಈ ದಿಟ್ಟತನವು ಬಹುಶಃ ಸ್ವಯಂ-ವಿವರಣಾತ್ಮಕವಾಗಿದೆ, ಮತ್ತು ವಿನೋದವೆಂದರೆ ಶ್ರೀ ಮಾರ್ಗುಲಿಸ್ ನಾನು ಇದನ್ನು ನನ್ನ ಕಡೆಯಿಂದ ಊಹೆಯ ಮೂಲಕ ಉತ್ಪ್ರೇಕ್ಷಿಸಿದ್ದೇನೆ ಎಂದು ಒಪ್ಪಿಕೊಳ್ಳುತ್ತಾನೆ."

(ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-457-462)

ಯಾವುದೇ ಉಲ್ಲೇಖಗಳು ಕಂಡುಬಂದಿಲ್ಲ ಎರಡು ಒಂಟೆಗಳ ಬೆಲೆಗೆ ಬುಡಕಟ್ಟಿನ ವಿರುದ್ಧ ಇಡೀ ಯುದ್ಧವನ್ನು ಹೋರಾಡಲು ಬೇರೆ ಮಾರ್ಗವಿರಲಿಲ್ಲವೇ? ಅವರು ವಿಚಿತ್ರವಾದ ಆಲೋಚನೆಗಳನ್ನು ಹೊಂದಿದ್ದಾರೆ. ಓರಿಯಂಟಲಿಸ್ಟ್‌ಗಳು ಅಥವಾ ಮುಸ್ಲಿಮೇತರ ಇತಿಹಾಸಕಾರರು ಮುಸ್ಲಿಮರ ಬಗ್ಗೆ ದ್ವೇಷ ಮತ್ತು ದ್ವೇಷದಲ್ಲಿ ಮುಳುಗಿದ್ದಾರೆ, ಅವರು ಇತಿಹಾಸವನ್ನು ತಿರುಚುವುದು ತುಂಬಾ ಸುಲಭ ಮತ್ತು ಇದನ್ನು ಹೆಚ್ಚಾಗಿ ಕಾಣಬಹುದು. ಆದಾಗ್ಯೂ, ಈ ವಿಷಯದಲ್ಲಿ ಉಳಿದ ವಿಷಯವು ನಂತರ ಬರಲಿದೆ, ಇನ್‌ಶಾಅಲ್ಲಾಹ್.

ಲೋಕದ ಇತ್ತೀಚಿನ ಸ್ಥಿತಿಗತಿಗಳಿಗೆ ಸಂಬಂಧಿಸಿ ಮತ್ತೊಮ್ಮೆ ದುಆ ಮಾಡಲು ಮನವಿ ಮಾಡುತ್ತೇನೆ. ಹಮಾಸ್ ಮತ್ತು ಇಸ್ರೇಲಿನ ಯುದ್ಧ ಹಾಗೂ ಅದರ ಪರಿಣಾಮವಾಗಿ ಮಹಿಳೆಯರು ಮತ್ತು ಮಕ್ಕಳ ಸಮೇತ ಅಮಾಯಕ ಪೆಲಸ್ತೀನಿಯರ ಮರಣಗಳು ವರ್ಧಿಸುತ್ತಾ ಇವೆ. ಯುದ್ಧದ ಸ್ಥಿತಿಗಳು ಯಾವ ವೇಗದಿಂದ ತೀವ್ರಗೊಳ್ಳುತ್ತಿದೆಯೋ ಮತ್ತು ಇಸ್ರೇಲ್ ಸರ್ಕಾರ ಹಾಗೂ ದೊಡ್ಡ ಶಕ್ತಿಶಾಲಿ ರಾಷ್ಟ್ರಗಳು ಯಾವ ಕಾರ್ಯನೀತಿಯನ್ನು ಪಾಲಿಸುತ್ತಿವೆಯೋ ಅದರಿಂದ ಈಗ ಜಾಗತಿಕ ಯುದ್ಧ ನಡೆಯಬಹುದೆಂದು ತೋರುತ್ತಿದೆ. ಈ ಯುದ್ಧದ ವಲಯ ವಿಸ್ತಾರವಾಗುತ್ತಿರುವುದಾಗಿ ತೋರುತ್ತಿದೆಯೆಂದೂ ಬೇಗನೇ ಯುದ್ಧವನ್ನು ಕೊನೆಗೊಳಿಸಲು ಕಾರ್ಯನೀತಿಯನ್ನು ಕೈಗೊಳ್ಳದಿದ್ದರೆ ಲೋಕವು ನಾಶವಾಗುವುದು ಎಂದೂ ಕೆಲವು ಇಸ್ಲಾಮಿಕ ದೇಶಗಳ ಅಧ್ಯಕ್ಷರು, ರಷ್ಯಾ, ಚೈನಾ ಮತ್ತು ಕೆಲವು ವಿಶ್ಲೇಷಕರು ಕೂಡ ಈಗಂತು ಬಹಿರಂಗವಾಗಿ ಹೇಳಲು ಮತ್ತು ಬರೆಯಲು ಶುರುಮಾಡಿರುವರು. ಇವೆಲ್ಲವೂ ವಾರ್ತೆಗಳಲ್ಲಿ ಪ್ರಸಾರವಾಗುತ್ತಿವೆ. ಪೂರ್ತಿ ಸ್ಥಿತಿಗತಿಗಳು ನಿಮ್ಮೆಲ್ಲರ ಮುಂದೆ ಇವೆ. ಆದ್ದರಿಂದ ಅಹ್ಮದಿಯರು ದುಆಗಳ ಕಡೆಗೆ ವಿಶೇಷವಾಗಿ ಗಮನಹರಿಸಬೇಕು. ಆರಾಮದಿಂದ ಇರಬೇಡಿರಿ. ಪ್ರತಿ ನಮಾಝಿನಲ್ಲಿ ಒಂದು ಸಜ್‌ದ ಅಥವಾ ಕನಿಷ್ಠ ಪಕ್ಷ ದಿನದ ಒಂದು ನಮಾಝಿನಲ್ಲಿ ಒಂದು ಸಜ್‌ದ ಖಂಡಿತವಾಗಿಯೂ ಇದಕ್ಕಾಗಿ ಮಾಡಬೇಕು. ಅದರಲ್ಲಿ ದುಆ ಮಾಡಬೇಕು. ಪಾಶ್ಚಿಮಾತ್ಯದ ಯಾವುದೇ ರಾಷ್ಟ್ರಗಳ ಅಧ್ಯಕ್ಷ ಈ ವಿಷಯದಲ್ಲಿ ನ್ಯಾಯಪಾಲನೆ ಮಾಡುತ್ತಿಲ್ಲ. ಯಾವ ದೇಶದ ಅಧ್ಯಕ್ಷ ಒಳ್ಳೆಯವನು ಅಥವಾ ಯಾವ ದೇಶದ ನೇತಾರ ಕೆಟ್ಟವನು ಎಂಬ ಚರ್ಚೆಯಲ್ಲಿ ಅಹ್ಮದಿಯರು ನಿರತರಾಗಬಾರದು. ಎಲ್ಲಿಯ ವರೆಗೆ ಧೈರ್ಯದಿಂದ ಯಾರಾದರೂ ಯುದ್ಧವನ್ನು ನಿಲ್ಲಿಸಲು ಪ್ರಯತ್ನಿಸುವುದಿಲ್ಲವೋ ಅಲ್ಲಿಯ ವರೆಗೆ ಅವರು ಲೋಕವನ್ನು ನಾಶದ ಕಡೆಗೆ ಕೊಂಡೊಯ್ಯಲು ಕಾರಣಕರ್ತರಾಗುತ್ತಾರೆ. ದುಆಗಳನ್ನು ಮಾಡಬೇಕು ಮತ್ತು ದೌರ್ಜನ್ಯವನ್ನು ತಡೆಯಬೇಕು ಎಂಬ ಸಂಗತಿಯನ್ನು ಹರಡಲು ಪ್ರಯತ್ನಿಸಿರಿ. ಯಾವನಾದರೂ ಅಹ್ಮದಿಗೆ ಯಾರೊಂದಿಗಾದರೂ ನಂಟು ಇದ್ದರೆ ಅವರನ್ನು ಮನವರಿಕೆ ಮಾಡಿಸಬೇಕು.

'ನಮ್ಮ ಮುಗ್ಧ ಪ್ರಜೆಗಳನ್ನು ಹಮಾಸ್ ಕೊಂದಿದೆ; ಆದ್ದರಿಂದ ನಾವು ಅದರ ಸೇಡು ತೀರಿಸುವೆವು' ಎಂದು ಇಸ್ರೇಲ್ ಹೇಳುತ್ತಿದೆ. ಆದರೆ ಈ ಪ್ರತೀಕಾರ ಎಲ್ಲ ಮಿತಿಯನ್ನು ಪಾರು ಮಾಡಿದೆ. ಎಷ್ಟು ಇಸ್ರೇಲರು ಸಾವನ್ನಪ್ಪಿರುವರು ಎಂದು ಹೇಳಲಾಗುತ್ತಿವೆಯೋ ಅದರ ನಾಲ್ಕೈದು ಪಟ್ಟು ಅಧಿಕ ಮುಗ್ಧ ಪೆಲಸ್ತೀನಿಯರ ಜೀವಹಾನಿ ಉಂಟಾಗಿದೆ. ಹಮಾಸನ್ನು ಕೊನೆಗೊಳಿಸುವುದು ಗುರಿ ಎಂದಾದರೆ ಅವರೊಂದಿಗೆ ಮುಖಾಮುಖಿಯಾಗಿ ಯುದ್ಧ ಮಾಡಬೇಕು. ಮಹಿಳೆಯರನ್ನು ಮತ್ತು ಮಕ್ಕಳನ್ನು ಏಕೆ ಸಾವಿಗೆ ಗುರಿಪಡಿಸುತ್ತೀರಿ. ಅದೇ ರೀತಿಯಲ್ಲಿ ನೀರು, ಆಹಾರ ಮತ್ತು ಚಿಕಿತ್ಸೆಯಿಂದಲೂ ಪೆಲಸ್ತೀನಿಯರನ್ನು ಇಸ್ರೇಲರು ವಂಚಿತಗೊಳಿಸಿರುವರು.

ಈ ರಾಷ್ಟ್ರಗಳು ವಾದಿಸುವ ಮಾನವ ಹಕ್ಕುಗಳು ಮತ್ತು ಯುದ್ಧ ನೀತಿಗಳು ಎಲ್ಲಾ ಇಲ್ಲಿಗೆ ಕೊನೆಗೊಳ್ಳುತ್ತವೆ. ಆದರೂ ಕೆಲವು ಜನರು ಇದರ ಬಗ್ಗೆ ಗಮನಸೆಳೆಯುತ್ತಿದ್ದಾರೆ. ಉದಾಹರಣೆಗೆ, ಅಮೇರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಕೆಲವು ದಿನಗಳ ಹಿಂದೆ ಹೀಗೆ ಹೇಳಿದರು: ಯುದ್ಧ ಮಾಡುವುದಾದರೆ ಯುದ್ಧ ನೀತಿಗಳನ್ನು ಮುಂದಿರಿಸಬೇಕು. ಮುಗ್ಧ ಪ್ರಜೆಗಳ ಮೇಲೆ ದೌರ್ಜನ್ಯ ನಡೆಯಬಾರದು ಎಂದು. ವಿಶ್ವಸಂಸ್ಥೆಯ ಜನರಲ್ ಸೆಕ್ರಟರಿ ಕೂಡ ತನ್ನ ಹೇಳಿಕೆಯನ್ನು ನೀಡಿದ್ದರು. ಅದಕ್ಕಾಗಿ ಇಸ್ರೇಲ್ ಸರ್ಕಾರ ಬೊಬ್ಬೆ ಹಾಕಿದಾಗ, ಶಾಂತಿಯ ಚಾಂಪಿಯನ್ ಎಂದು ಸ್ವತಃ ಭಾವಿಸುವ ಲೋಕದ ಶಕ್ತಿಶಾಲಿ ರಾಷ್ಟ್ರಗಳ ಯಾವ ಅಧ್ಯಕ್ಷರೂ ವಿಶ್ವಸಂಸ್ಥೆಯ ಸೆಕ್ರಟರಿಗೆ ಬೆಂಬಲವಾಗಿ ಏನೂ ಹೇಳಲಿಲ್ಲ. ಬದಲಾಗಿ ಅವರ ಹೇಳಿಕೆಯನ್ನು ಇಷ್ಟಪಡಲಿಲ್ಲ. ಏನಿದ್ದರೂ ಸ್ಥಿತಿಗತಿಗಳು ಬಹಳ ಕೆಟ್ಟು ಹೋಗಿವೆ ಮತ್ತು ಕೆಟ್ಟು ಹೋಗುತ್ತಾ ಇವೆ.

ಪಾಶ್ಚಿಮಾತ್ಯ ಮಾಧ್ಯಮಗಳು ಒಂದು ಪಕ್ಷದ ವಾರ್ತೆಗಳನ್ನು ಅತಿಶಯೋಕ್ತಿಯಿಂದ ಪ್ರಸಾರ ಮಾಡುತ್ತವೆ. ಮರುಪಕ್ಷದ ಕುರಿತು ಒಂದು ಮೂಲೆಯಲ್ಲಿ ಚಿಕ್ಕದಾಗಿ ವಾರ್ತೆ ಕೊಡುತ್ತವೆ. ಉದಾಹರಣೆಗೆ, ಹಮಾಸ್‌ನಲ್ಲಿ ಕೈದಿಯಾಗಿ ಇದ್ದಾಗ ನನ್ನೊಂದಿಗೆ ಉತ್ತಮವಾಗಿ ವರ್ತಿಸಲಾಗಿತ್ತು ಎಂದು ಕೆಲವು ದಿನಗಳ ಹಿಂದೆ ಬಿಡುಗಡೆಗೊಂಡ ಒಂದು ಮಹಿಳೆ ಹೇಳಿದ್ದನ್ನು ಒಂದು ಮೂಲೆಯಲ್ಲಿ ವಾರ್ತೆಯಾಗಿ ನೀಡಿತು. ಹಮಾಸಿನ ಜೈಲು ಒಂದು ನರಕವಾಗಿದೆ ಎಂದು ಯಾರೋ ಹೇಳಿದ್ದನ್ನು ಸ್ಥಿರವಾದ ದೊಡ್ಡ ವಾರ್ತೆಯಾಗಿ ಪ್ರಸಾರ ಮಾಡಿತು. ಎಲ್ಲ ಸ್ಥಿತಿಗತಿಗಳನ್ನು ನೇರವಾಗಿ ಮುಂದಿರಿಸುತ್ತಾ ಲೋಕದ ಜನರಿಗೆ ಸ್ವತಃ ತೀರ್ಮಾನ ಮಾಡಲು ಅನುವು ಮಾಡಿಕೊಡುತ್ತಿದ್ದರೆ ಅದು ನ್ಯಾಯಪಾಲನೆ ಆಗುತ್ತಿತ್ತು. ಒಟ್ಟಿನಲ್ಲಿ ಈ ಸ್ಥಿತಿಯಲ್ಲಿ ನಾವು ದುಆಗಳ ಕಡೆಗೆ ಬಹಳ ಗಮನಹರಿಸಬೇಕಾಗಿದೆ.

ದುಆದೊಂದಿಗೆ ತಮ್ಮ ಶಕ್ತ್ಯಾನುಸಾರ ಪ್ರಯತ್ನವನ್ನು ಸಹ ಮಾಡಬೇಕಾಗಿದೆ. ದೌರ್ಜನ್ಯಪೀಡಿತ ಮುಸ್ಲಿಮರಿಗಾಗಿ ದುಆ ಮಾಡಿರಿ. ಮುಸ್ಲಿಂ ಸರ್ಕಾರಗಳ ಕಡೆಯಿಂದ ಒಂದು ಸಂಯುಕ್ತ ಹಾಗೂ ದೀರ್ಘಕಾಲೀನ ಯೋಜನೆ ಉಂಟಾಗಲಿಕ್ಕಾಗಿಯೂ ದುಆ ಮಾಡಿರಿ. ಮುಸ್ಲಿಮರ ಕಷ್ಟತೆಗಳು ದೂರವಾಗಲಿಕ್ಕಾಗಿ ನಮ್ಮೊಳಗೆ ಒಂದು ಪ್ರತ್ಯೇಕವಾದ ನೋವು ಇರಬೇಕು.

ನಾವಂತು ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬುವವರಾಗಿದ್ದೇವೆ. ನಮಗೆ ಮುಸ್ಲಿಮರು ಕಷ್ಟತೆಗಳನ್ನು ಕೊಡುತ್ತಿರುವುದಾದರೂ ಹಝ್ರತ್ ಮಸೀಹ್ ಮೌಊದ್(ಅ) ತನ್ನೊಂದು

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*

*(ಪುಟ ಸಂಖ್ಯೆ 02ರ ಉಳಿದ ಭಾಗ)*

ವಸ್ತುತಃ ಖಾತಮಲ್ ಔಲಿಯಾ ಹಝ್‌ರತ್ ಇಮಾಮ್ ಮಹದಿ(ಅ) ರವರ ಪವಿತ್ರ ಅಂತರಂಗವಾಗಿದೆ. ಏಕೆಂದರೆ ಇಮಾಮ್ ಮಹದಿಯರು ಪ್ರವಾದಿ (ಸ) ರವರದ್ದೇ ಪರಿಪೂರ್ಣ ಮಾದರಿಯಾಗಿದ್ದಾರೆ. (ಶರಹ ಫಸೂಸ್ ಅಲ್‌ಹಕಮ್ ಹಿಂದಿ, ಹಝ್‌ರತ್ ಮುಲ್ಲಾ ಅಬ್ದುರ್ರಹ್ಮಾನ್ ಹಾಮಿ, ಪುಟ–69)

ಮುನ್ಸಿಫ್ ಪತ್ರಿಕೆಯ ಸಂಪಾದಕರು ಗಮನ ನೀಡಲಿ! ಇಮಾಮ್ ಮಹದಿಯರು ಪ್ರವಾದಿ(ಸ) ರವರದ್ದೇ ಪರಿಪೂರ್ಣ ಮಾದರಿಯಾಗಿದ್ದಾರೆ ಎಂದರೆ ಹಝ್‌ರತ್ ರಸೂಲುಲ್ಲಹ್(ಸ) ರವರ ಪೂರ್ಣ ಪ್ರತಿಬಿಂಬಿತ ರೂಪ ಮತ್ತು ಅವರ ಸಾದೃಶ್ಯರಾಗಿರುವರು.

ಹಝ್‌ರತ್ ಶಾಹ್‌ವಲಿ ಮುಹದ್ದಿಸ್ ದೇಹಲ್ವಿ (ರಹ) (1114 ಹಿ.– 1175 ಹಿ) ಹೇಳುತ್ತಾರೆ:

"ಮುಹಮ್ಮದಿಯ ಸಮುದಾಯದಲ್ಲಿ ಆಗಮಿಸಲಿರುವ ವಾಗ್ದತ್ತ ಮಸೀಹನ ಹಕ್ಕಾಗಿದೆ. ಅವರು ಸಯ್ಯದುಲ್ ಮುರ್‌ಸಲೀನ್ (ಪ್ರವಾದಿಗಳ ಸರದಾರರು) ರವರ ಪ್ರಕಾಶಗಳನ್ನು ಪ್ರತಿಬಿಂಬಿಸುವರು. ಸಾಮಾನ್ಯ ಜನರು ಭಾವಿಸುವರು ವಾಗ್ದತ್ತ ಮಸೀಹರು ಲೋಕಕ್ಕೆ ಆಗಮಿಸುವಾಗ ಕೇವಲ ಒಬ್ಬ ಉಮ್ಮತಿಯಾಗಿ ಬರುವರು ಎಂದು. ಖಂಡಿತವಾಗಿಯೂ ಅದು ತಪ್ಪು ಬದಲಿಗೆ ಅವರು ಮುಹಮ್ಮದ್ ಹೆಸರಿನ ಪೂರ್ಣ ವ್ಯಾಖ್ಯಾನರೂಪಿಯಾಗಿರುವರು ಎಂದರೆ ಅವರು (ಅ) ಅವರದ್ದೆ(ಸ) ಬದಲಿ ರೂಪಯಾಗಿರುವರು. ಹೀಗೆ ಅವರ ಮತ್ತು ಒಬ್ಬ ಸಾಮಾನ್ಯ ಉಮ್ಮತಿಯ ನಡುವೆ ಬಹಳಷ್ಟು ವ್ಯತ್ಯಾಸವಿದೆ." (ಅಲ್ ಖೈರುಲ್ ಕಸೀರ್, ಹಝ್‌ರತ್ ಶಾಹ್ ವಲೀವುಲ್ಲಾ ಮುಹದ್ದಿಸ್ ದೆಹಲ್ವಿ, ಪುಟ–72, ಮದೀನ ಪ್ರೆಸ್ ಬಿಜ್ನೂರ್)

ಇಮಾಮ್ ಮಹದಿ, ಮುಹಮ್ಮದ್ ಹೆಸರಿನ ಪೂರ್ಣ ವ್ಯಾಖ್ಯಾನ ರೂಪಿಯಗಿರುವರು ಮತ್ತು ಅವರು (ಅ) ಅವರದ್ದೇ (ಸ) ಬದಲಿ ರೂಪವಾಗಿರುವರು. ಮುನ್ಸಿಫ್ ಪತ್ರಿಕೆಯ ಸಂಪಾದಕರು ಹೇಳಲಿ, ಅವರು ಈ ವಾಕ್ಯ ಕುರಿತು ಏನು ಅರ್ಥ ಭಾವಿಸುವರು? ಮುಹಮ್ಮದರ ಪ್ರತಿಬಿಂಬಿತರೂಪ ಎಂಬ ಆಕ್ಷೇಪ ದೂರವಾಗಿದೆಯೇ ಅಥವ ಇಲ್ಲ?

ಉರ್ದುವಿನ ಪ್ರಸಿದ್ಧ ಕವಿ ಜನಾಬ್ ಇಮಾಮ್ ಬಕ್ಷ್ (1188 ಹಿ–1253 ಹಿ) ತನ್ನ ಕವನ ಸಂಗ್ರಹದಲ್ಲಿ ಹೇಳುತ್ತಾರೆ.

ಅವ್ವಲ್ ವ ಆಖಿರ್ ಕಿ ನಿಸ್ಬತ್ ಹೋಗಿ ಸಾದಿಖ್ ಯಹಾಂ
ಸೂರತ್ ಮಾನಿ ಶಿಬ ಮುಸ್ತಫಾ ಪೈದಾ ಹುವಾ
ದೇಖ್ ಕರ್ ಉಸ್ಕೊ ಕರೇಂ ಗೆ ಲೋಗ್ ರುಜ್‌ಅತ್ ಕಾ ಗುಮಾನ್
ಯೂನ್ ಕಹೇಂಗೆ ಮೊಜ್‌ಝುಸೆ ಮುಸ್ತಫಾ ಪೈದಾ ಹುವಾ

ಅನುವಾದ : ಮುಸ್ತಫಾ (ಸ) ರವರ ರೂಪದಲ್ಲಿ ಹುಟ್ಟಿದರು ಎಂದರೆ ಹಝ್‌ರತ್ ರಸೂಲುಲ್ಲಾಹ್(ಸ) ರವರ ಅರ್ಥದಲ್ಲಿ ಆಗಮನವಾಗುವುದು. ಇಮಾಮ್ ಮಹದಿಯನ್ನು ನೋಡಿ ಜನರು ಮುಹಮ್ಮದ್ ಮುಸ್ತಫಾ(ಸ) ರವರ ರೂಪ ಎಂದೇ ಭಾವಿಸುವರು. ಸಂಪದಕರೇ! ಸಾದೃಶ್ಯರೂಪ ಮತ್ತು ಪ್ರತಿಬಿಂಬಿತ ರೂಪ ಒಂದೇ ಆಗಿದೆ. ಅಂದಹಾಗೆ ಪೂರ್ವ ಮಹಾತ್ಮರುಗಳ ಇದು ಒಮ್ಮತದ ತೀರ್ಪಾಗಿದೆ. ಇಮಾಮ್ ಮಹದಿಯರು ಹಝ್‌ರತ್ ರಸೂಲುಲ್ಲಾಹ್(ಸ) ರವರ ಪರಿಪೂರ್ಣ ಸಾದೃಶ್ಯರೂಪವಾಗಿರುವರು.

ಶೇಖ್ ಮುಹಮ್ಮದ್ ಅಕ್ರಮ್ ಸಾಬಿರಿ (1130 ಹಿ) ಹೇಳುತ್ತಾರೆ:

ಲೋಕದ ಆರಂಭದಲ್ಲಿ ಬಂದ ಆದಮರು(ಅ) ಮುಹಮ್ಮದ್(ಸ) ರವರ ಮೊದಲ ಸಾದೃಶ್ಯರೂಪವಾಗಿ ಆಗಮಿಸಿದರು ಎಂದರೆ ಲೋಕದ ಆರಂಭ ಮುಹಮ್ಮದ್ ಮುಸ್ತಫಾ (ಸ) ರವರ ಆಧ್ಯಾತ್ಮಿಕ ಪ್ರತಿಬಿಂಬ ರೂಪವಾಗಿ ಹಝ್‌ರತ್ ಆದಮ್ (ಅ) ಆಗಮಿಸಿದರು ಮತ್ತು ಮುಹಮ್ಮದ್ (ಸ) ರವರೇ ಅಂತಿಮ ಕಾಲದಲ್ಲಿ ಖಾತಮಲ್ ವಿಲಾಯತ್ ಇಮಾಮ ಮಹದಿಯರ ರೂಪದಲ್ಲಿ ಪ್ರಕಟಗೊಳ್ಳುವರು ಎಂದರರೆ ಮುಹಮ್ಮದ್ ಮುಸ್ತಫಾ (ಸ) ರವರ ಆಧ್ಯಾತ್ಮಿಕತೆ ಮಹದಿಯರಲ್ಲಿ ಅವತರಿಸುವುದು. (ಇಖ್ತಿಬಾಸ್ ಅಲ್ ಅನ್ವಾರ್–ಶೇಖ್ ಅಕ್ರಮ್ ಸಾಬರಿ ಪುಟ–52)

ಮಹಾತ್ಮ ಸೂಫಿ ಹಝ್‌ರತ್ ಖಾಜಾ ಫರೀದ್ ಸಾಹಿಬ್, ಆಫ್ ಚಾಂಚಡಾಂ ಶರೀಫ್ (1248 ಹಿ–1367 ಹಿ) ಹೇಳುತ್ತಾರೆ:

"ಹಝ್‌ರತ್ ಆದಮ್ ಸಫಿಯುಲ್ಲಾಹ್ ಯಿಂದ ಹಿಡಿದು ಖಾತಮಲ್ ವಿಲಾಯತ್ ಇಮಾಮ್ ಮಹದಿಯವರೆಗೆ ಹಝ್‌ರತ್ ಮುಹಮ್ಮದ್ ಮುಸ್ತಫಾ (ಸ) ಅವತರಣಗೊಂಡಿದ್ದಾರೆ. ಮೊದಲ ಬಾರಿಗೆ ಅವರು(ಸ) ಹಝ್‌ರತ್ ಆದಂ(ಅ) ರೂಪದಲ್ಲಿ ಅವತರಿಸಿದರು. ಅನಂತರ ಇತರ ಮಹಾತ್ಮರುಗಳಲ್ಲಿ ಹಂತಹಂತವಾಗಿ ಅವತರಿಸಿದರು ಮತ್ತು ಅವತರಿಸುತ್ತಿರುವರು. ಕೊನೆಗೆ ಇಮಾಮ್ ಮಹದಿಯಾಗಿ ಅವತರಿಸುವರು. ಅಂದಹಾಗೆ ಹಝ್‌ರತ್ ಆದಮ್(ಅ) ರಿಂದ ಹಿಡಿದು ಇಮಾಮ್ ಮಹದಿಯವರೆಗೆ ಎಷ್ಟೆಲ್ಲಾ ಪ್ರವಾದಿಗಳು ಮತ್ತು ಮಹಾತ್ಮರುಗಳು ಆಗಮಿಸಿದ್ದಾರೆ. ಅವರೆಲ್ಲರೂ ಮುಹಮ್ಮದ್(ಸ) ರವರ ಆಧ್ಯಾತ್ಮಿಕ ಪ್ರತಿನಿಧಿಗಳೆ ಆಗಿದ್ದಾರೆ. (ಮುಖಾಬೀಸುಲ್ ಮುಜಾಲಿಸ್, ಪುಟ–419, ಮಖ್ಬೂಸ್ ಸಂಖ್ಯೆ–62, ಮೌಲಾನಾ ರುಕ್ನುದ್ದೀನ್, ಅನುವಾದ: ಕಪ್ತಾನ್ ವಾಹಿದ್ ಬಖ್ಷ್ ಸಯಾಲ್, ಇಸ್ಲಾಮಿಕ್ ಬುಕ್ ಫೌಂಡೇಷನ್ ಲಾಹೋರ್, ಸೂಫೀ ಫೌಂಡೇಷನ್ ಬಹಾವಲ್‌ಪೂರ್)

ಶಿಯಾ ಪಂಡಿತರು ಮೌಲಾನ ಸಯ್ಯದ್ ಮುಹಮ್ಮದ್ ಸಬ್‌ತೇನ (1335 ಹಿ) ಹೇಳುತ್ತಾರೆ: ಮಹದಿಯರು ಆತ್ಮೀಯವಾಗಿ ರಸೂಲುಲ್ಲಾಹ್ (ಸ) ರವರ ಹಾಗೂ ಅವರ ಪವಿತ್ರ ಗುಣಗಳ ಪ್ರತಿನಿಧಿಯಾಗಿರುವರು ಮತ್ತು ರಸೂಲುಲ್ಲಾಹ(ಸ) ರವರ ಕನ್ನಡಿಯಾಗಿರುವರು. ಮುಹಮ್ಮದರ(ಸ) ಎಲ್ಲ ಮಹಾನ್ ಗುಣಗಳು ಅವರಲ್ಲಿ (ಅ) ಅವತರಿಸುವುದು. ಅಂದಹಾಗೆ ಅವರು (ಅ) ಏಕರೂಪ ಏಕನಾಮ, ಏಕ ಪದನಾಮ, ಮುಹಮ್ಮದಿ ಪ್ರಕಾಶ, ಮುಹಮ್ಮದಿ ಗುಣಗಳು ಸಹ ಸಾದೃಶ್ಯರೂಪವಾಗಿ ಬರುವುದು ಅನಿವಾರ್ಯವಾಗಿರುವುದು. (ಅಸ್ಸಿರಾತುಸ್ಸವಿ ಫೀ ಅಹ್ವಲುಲ್ ಮಹದಿ, ಪುಟ–409, ಸೈಯದ್ ಮುಹಮ್ಮದ್ ಸಬ್ತೀನ್, ಮೆನೇಜರ್ ಅಲ್‌ಬುರ್ಹಾನ್ ಬುಕ್ ಡಿಪೊ 33, ಉಮರ್ ಓಡ್ ಇಸ್ಲಾಮ್ ಪುರ ಲಹೋರ್)

ಖ್ವಾರಿ ಮುಹಮ್ಮದ್ ತಯ್ಯಿಬ್ ಮಾಜಿ ಮುಹ್‌ತಮಿಮ್ ದಾರೂಲ್ ಉಮಾಮ್ ದೇವಬಂದ್ (1320 ಹಿ–1403 ಹಿ) ಹೇಳುತ್ತಾರೆ: (1) ಏಕೆಂದರೆ ಹಝ್‌ರತ್ ಈಸಾ(ಅ) ರವರು ಆಗಮಿಸಿದ ಕಾರಣ ಮುಹಮ್ಮದ(ಸ) ರ ರೂಪ ಅವತರಿಸಿದಂತಾಗಿದೆ. ಮತ್ತು ಹುಝೂರ್‌ರ ಆಧ್ಯಾತ್ಮಿಕ ಪುತ್ರರೆಂದು ಸಾಬೀತಾಗುತ್ತದೆ. ಆದ್ದರಿಂದ **"ವಲದು ಸಿರ್ರುನ್ ಲಿಅಬೀಹಿ"** ತತ್ತದನ್ವಯ ಈಸಾ (ಅ) ರ ವ್ಯಕ್ತಿತ್ವ, ರಸೂಲುಲ್ಲಾಹ್ (ಸ) ರವರ ವ್ಯಕ್ತಿತ್ವದ ಆ ಎಲ್ಲಾ ವಿಶೇಷ ಗುಣ ಅವತರಿಸಿದವು. ಅದು ದೈವಿಕವಾಗಿ ಇತರೆ ಪ್ರವಾದಿಗಳಿಗೆ ಲಭಿಸುತ್ತಿರಲಿಲ್ಲ. ಅಂದಹಾಗೆ ಖಾತಮಿಯತ್ ಪದವಿ, ಪ್ರಸಿದ್ಧಿಯ ಗುಣ, ದಾನನ ಸ್ಥಾನ, ಕಾರುಣ್ಯ ಮುಗ್ಧತೆ, ಜ್ಞಾನ, ಆಧ್ಯಾತ್ಮಿಕ ಜ್ಞಾನ, ವಲಸೆ ಹೋಗುವಿಕೆ, ಜಿಹಾದ್, ಸ್ಥಾನಮಾನ ಆರಾಧನೆಗಳು, ಸುವಾರ್ತೆಗಳು, ಅಂತ್ಯ ದಿನದ ಮಾಹಿತಿ ಇತ್ಯಾದಿಯಂತಹ ಮುಖ್ಯ ಮತ್ತು ಮಹೋನ್ನತ ಕಾರ್ಯಗಳು ರಸೂಲುಲ್ಲಾಹ್ (ಸ) ರ ಪವಿತ್ರ ವ್ಯಕ್ತಿತ್ವದಿಂದ ಯಾರಿಗಾದರೂ ಹೊಂದಾಣಿಕೆ ಸಾಬೀತಾಗುವುದಿದ್ದರೆ ಅದು ಹಝ್‌ರತ್ ಈಸಾ (ಅ) ರವರ ಪವಿತ್ರ ವ್ಯಕ್ತಿತ್ವ ಆಗಿದೆ. (ತಾಲೀಮಾತುಲ್ ಇಸ್ಲಾಂ ಮತ್ತು ಮಸೀಹಿ ಅಖ್ವಾಮ್, ಖಾರಿ ಮುಹಮ್ಮದ್ ತೈಯಬ್ ದಾರುಲ್ ಉಲೂಮ್, ದೇವ್‌ಬಂದ್, ಪುಟ–144 ನಫೀಸ್ ಅಕಾಡಮಿ)

(2) ಏನಿದ್ದರೂ ಖಾತಮಿಅತ್‌ನಲ್ಲಿ ಹಝುರತ್ ಮಸೀಹ್(ಅ) ರವರಿಗೆ ಪರಿಪೂರ್ಣ ಹೊಂದಾಣಿಕೆ ಇರುತ್ತಿದ್ದರೆ. ಹೀಗೆ ಖಾತಮಿಅತ ಗುಣಗಳಲ್ಲಾಗಲೀ ಮತ್ತು ಸ್ಥಾನದಲ್ಲಾಗಲಿ ಹೊಂದಾಣಿಕೆಯನ್ನು ವಿಶಿಷ್ಟಗೊಳಿಸಲಾಗಿದೆ. ಅದರಿಂದ ಸ್ಪಷ್ಟಗೊಳ್ಳುವುದೇನೆಂದರೆ ಹಝ್‌ರತ್ ಈಸಾ(ಅ) ರವರಿಗೆ ಮುಹಮ್ಮದ್ (ಸ) ರವರ ಆಸ್ಥಾನದಿಂದ ಖಲ್‌ಖನ್ ವ ರುತ್‌ಬತನ್ ವ ಮಖಾಮನ್ ಇದೇ ರೀತಿಯ ಹೊಂದಾಣಿಕೆಯಿದೆ. ಯಾವ ರೀತಿ, ಒಂದು ವಸ್ತುವಿಗೆ ಎರಡು ಸಹಭಾಗಿಗಳಲ್ಲಿ ಇರುತ್ತದೆ. ಅಥವ ತಂದೆ ಮಗನಲ್ಲಿ ಇರುತ್ತದೆ." (ತಾಲೀಮಾತುಲ್ ಇಸ್ಲಾಂ ಮತ್ತು ಮಸೀಹಿ ಅಖ್ವಾಮ್, ಖಾರಿ ಮುಹಮ್ಮದ್ ತೈಯಬ್ ದಾರುಲ್ ಉಲೂಮ್, ದೇವ್‌ಬಂದ್, ಪುಟ–129 ನಫೀಸ್ ಅಕಾಡಮಿ)

ನಾವು ಒಂದಲ್ಲ, ಎರಡಲ್ಲ ಬದಲು ಹಲವು ಪುರಾವೆಗಳೊಂದಿಗೆ ಸಾಬೀತುಪಡಿಸಿದ್ದೇವೆ. ಸಮುದಾಯದ ಮಹಾತ್ಮರು ಈ ಮಾತಿನ ಮೇಲೆ ಒಮ್ಮತದ ಅಭಿಪ್ರಾಯ ಹೊಂದಿದ್ದಾರೆ. ಇಮಾಮ್ ಮಹದಿ ಹಝ್‌ರತ್ ರಸೂಲುಲಾಹ್(ಸ) ರ ಕೇವಲ ಸಾದೃಶ್ಯ ರೂಪ ಆಗಿರುವುದಲ್ಲದೇ ಪರಿಪೂರ್ಣ ಸಾದೃಶ್ಯ ರೂಪವಾಗಿರುವರು. ಇನ್ನಷ್ಟು ಪುರಾವೆಗಳಿಗೋಸ್ಕರ ನಮ್ಮ ಪುಸ್ತಕಗಳಾದ "ಅಹ್ಮದಿಯಾ ತಾಲಿಮಿ ಪಾಕೆಟ್ ಬುಕ್, ಲೇಖಕರು ಖಾಜ್ಹಿ ಮುಹಮ್ಮದ್ ನಝೀರ್ ಸಾಹಿಬ್ ಲಾಯಲ್‌ಪೂರಿ ಅಲ್ಲದೇ "ಮುಕಮ್ಮಲ್ ತಬ್ಲೀಗ್ಹಿ ಪಾಕೆಟ್ ಬುಕ್–ಲೇಖಕರು ಖಾಲಿದ್ ಅಹ್ಮದಿಅತ್ ಮಲಿಕ್ ಅಬ್ದುಲ್ ರಹ್ಮಾನ್ ಖಾದಿಮ್ ಸಾಹಿಬ್, ನೋಡಬಹುದಾಗಿದೆ. ಮುಂದಿನ ಸಂಚಿಕೆಯಲ್ಲಿ ಮುನ್ಸಿಫ್‌ನ ಇತರ ಆಕ್ಷೇಪಣೆಗಳಿಗೆ ಉತ್ತರ ನೀಡಲಾಗುವುದು. **(ಮನ್ಸೂರ್ ಅಹ್ಮದ್ ಮಸ್ರೂರ್)**

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ 'ಮಸ್ಜಿದ್ ಮುಬಾರಕ್' ನಿಂದ ಖುತ್‌ಬ ಜುಮುಅವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ.

## ತಫ್ಸೀರೆ ಕಬೀರ್

### ಅಬುಲಹಬ್ ಪತ್ನಿಯ ಕಥೆಯು ಕೇವಲ ಕಟ್ಟುಕಥೆಯಾಗಿದೆ, ಇಡೀ ಲೋಕಕ್ಕೆ ಹೆದರದ ಅಲ್ಲಾಹನ ಆ ಪ್ರವಾದಿಯು(ಸ) ಓರ್ವ ದುರ್ಬಲ ಹೆಣ್ಣಿಗೆ ಹೆದರಲು ಹೇಗೆ ಸಾಧ್ಯ, ಅಲ್ಲಾಹನು ಅವಳನ್ನು ಮಾಯವಾಗಿಸುವ ದುಸ್ಥಿತಿ ಒದಗಿ ಬಂತು.

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಬನೀ ಈಸ್ರಾಯೀಲ್ ವಚನ 46 **ವಈಝಾ ಖರಅ್‌ತಲ್ ಖುರ್‌ಆನ ಜಅಲ್‌ನ ಬೈನಕ ವ ಬೈನಲ್ಲಝೀನ ಲಾ ಯುಮಿನೂನ ಬಿಲ್‌ಆಖಿರತಿ ಹಿಜಾಬಮ್ಮಸ್‌ತೂರ**. ದ ವ್ಯಾಖ್ಯಾನದಲ್ಲಿ ಹೇಳುತ್ತಾರೆ.

ಈ ವಚನಕ್ಕೆ ಎರಡು ಅರ್ಥಗಳಿವೆ. 1) ನೀನು ಪವಿತ್ರ ಖುರ್‌ಆನ್ ಪಠಿಸುವಾಗ ನಾವು ನಿನ್ನ ನಡುವೆ ಮತ್ತು ಅಂತಿಮ ತೀರ್ಮಾನ ದಿನದ ಮೇಲೆ ವಿಶ್ವಾಸ ಹೊಂದಿದ ಜನರ ನಡುವೆ ಎಂತಹ ಪರದೆಯನ್ನು ಉಂಟು ಮಾಡುತ್ತೇವೆ ಎಂದರೆ ಅದನ್ನು ಸ್ವಯಂ ಅವರೇ ತಿಳಿಯಲಾರರು. ಎಂದರೆ ಆ ಪರದೆಯು ಸಹ ಅವರ ದೃಷ್ಟಿಗೆ ಗೋಚರಿಸದು. ಇದನ್ನು ಹೇಳುವ ಉದ್ದೇಶ ಯಾವೊಬ್ಬ ಮೂಡನು ಈ ಬಾಹ್ಯ ಪರದೆ ಎಂದು ಭಾವಿಸಬಾರದು.

ಕೆಲ ಜನರು ಪರದೆ ಎಂದೆ ಅದರಲ್ಲಿ ನಬಿವರ್ಯರು(ಸ) ಅಡಗಿಕೊಳ್ಳುತ್ತಿದ್ದರು ಎಂದು ಭಾವಿಸುತ್ತಾರೆ, ಅವರು ಅಬುಲಹಬನ ಪತ್ನಿಯ ಕಥೆಯನ್ನು ಬರೆದಿದ್ದಾರೆ, ಸೂರ: ಲಹಬ್ ಅವತರಿಸಿದಾಗ, **ಫೀಜೀದಿಹಾ ಹಬ್‌ಲುಮ್ ಮಿಮ್ಮಸದ್**, ಅವತಾರ ತಡೆದು ಅವಳು ಕೋಪಗೊಂಡು ನಬಿ(ಸ) ಅವರಿಗೆ ಸಂಕಷ್ಟಕ್ಕೆ ಒಳಪಡಿಸಲು ಮುಂದಾದಳು. ನಬಿ ಕರೀಂ(ಸ) ಪ್ರಾರ್ಥಿಸಿದರು. ಓ ದೇವಾ ಆಕೆಯ ದುಷ್ಟತನದಿಂದ ನನ್ನನ್ನು ರಕ್ಷಿಸು. ಆಗ ಅಲ್ಲಾಹನು ಅವರ ಮುಂದೆ ಒಂದು ಪರದೆಯನ್ನು ಅಳವಡಿಸಿದನು. ಅದರಿಂದ ಅವಳಿಗೆ ಕಾಣಲಾಗಲಿಲ್ಲ. ಇದೆಲ್ಲ ಕಪೋಲಕಲ್ಪಿತ ಮಾತ್ರವಾಗಿದೆ. ಇಡೀ ಲೋಕಕ್ಕೆ ಹೆದರದ ಆ ಅಲ್ಲಾಹನ ಪ್ರವಾದಿ(ಸ) ಓರ್ವ ದುರ್ಬಲ ಹೆಣ್ಣಿಗೆ ಹೆದರಲು ಸಾಧ್ಯವೇ? ಅವಳಿಂದ ಎಷ್ಟೊಂದು ಹೆದರಿದರೆಂದರೆ ಅಲ್ಲಾಹನು ಅವಳನ್ನು ಮಾಯವಾಗಿಸಬೇಕಾಯಿತು. ಈ ಅಸಾಧಾರಣ ಮಾತನ್ನು ಯಾವ ವಿವೇಕನು ನಂಬಲು ಸಾಧ್ಯವಿಲ್ಲ. ಈ ವರದಿ ಪ್ರಸ್ತುತಪಡಿಸುವವರು, ಇಷ್ಟು ಯೋಚಿಸುವುದಿಲ್ಲ. ಅಲ್ಲಾಹನು ಆ ಪರದೆಯನ್ನು **"ಮಸ್ತೂರ್"** ಎಂದು ಕರೆದಿದ್ದಾನೆ, ಎಂದರೆ ಅದು ಕಣ್ಣಿಗೆ ಗೋಚರಿಸಲಾಗದಂತಹ ಪರದೆಯಾಗಿದೆ. ಆದರೆ ಈ ಜನರು ನಬಿ ಕರೀಂ(ಸ) ರನ್ನು ಮಸ್ತೂರ್ ಎಂದು ಭಾವಿಸುತ್ತಾರೆ.

(2) ಇದರ ಎರಡನೆ ಅರ್ಥ ಏನಾಗಬಹುದೆಂದರೆ, ಆ ಪರದೆಯ ಮುಂದೆ ಮತ್ತು ಹಿಂದೆ ಒಂದು ಪರದೆ ಇರುತ್ತದೆ, ಎಂದರೆ ಒಂದು ಪರದೆ ನಿನ್ನ ಮತ್ತು ಅವರ ನಡುವೆ ಇರುವುದಿಲ್ಲ. ಬದಲು ಹಲವು ಪರದೆಗಳು ಮಧ್ಯದಲ್ಲಿರುತ್ತವೆ. ಒಂದು ಪರದೆ ಸಮುದಾಯದ ಹೆಮ್ಮೆಯ ಕುರಿತಾಗಿದ್ದರೆ, ಒಂದು ಸಂಪತ್ತಿನ ಪರದೆ, ಒಂದು ನೀತಿಯ ಪರದೆ ಇತ್ಯಾದಿ, ಇತ್ಯಾದಿ, ಎಂದರೆ ಕೆಲವೊಮ್ಮೆ ಜನರು ಈ ಪ್ರವಾದಿಯನ್ನು ನಂಬಿದರೆ ಸಮುದಾಯದವರನ್ನು ಬಿಡಬೇಕಾಗುತ್ತದೆ, ಒಮ್ಮೆ ಸಂಪತ್ತು ಕಳೆದುಕೊಳ್ಳುವ ಭೂಮಿ ಮುಂದಾಗುತ್ತದೆ, ಒಮ್ಮೆ ಹಲವು ರೀತಿಯ ದುಶ್ಚಟಗಳ ಪರದೆ ಮುಂದಾಗುತ್ತವೆ, ವಿಶ್ವಾಸ ತಂದರೆ ಇದನ್ನು ಬಿಡಬೇಕಾಗುತ್ತದೆ. ಆದುದರಿಂದ ಈ ವಚನದಲ್ಲಿ ಹೇಳಲಾಗಿದೆ, ಎಲ್ಲಿಯವರೆಗೆ ಈ ಜನರು ಈ ಪರದೆಗಳನ್ನು ದೂರ ಸರಿಸುವುದಿಲ್ಲ, ನಿನ್ನ ಕಡೆ ವಾಲಲಾರರು, ಆದರೆ ಆಪತ್ತಿನ ವಿಷಯವೇನೆಂದರೆ ಆ ಪರದೆಗಳು ಇವರಿಗೆ ಗೋಚರಿಸದು. ಅವರ ದೃಷ್ಟಿಯಿಂದ ದೂರವಾಗಿವೆ. ಅವರು ಪವಿತ್ರ ಖುರ್‌ಆನ್ನೇ ಕೆಟ್ಟ ವಸ್ತು ಎಂದು ಭಾವಿಸಿಕೊಂಡಿದ್ದಾರೆ, ಅದು ಒಳ್ಳೆಯದಾಗಿರುತ್ತಿದ್ದರೆ ನಮ್ಮ ಹೃದಯಗಳ ಮೇಲೆ ಅದರ ಪ್ರಭಾವವಾಗುತ್ತಿತ್ತು, ಎಂದರೆ ಅವರ ಹೃದಯಗಳ ಮೇಲೆ ಎಂತಹ ತುಕ್ಕು ಹಿಡಿದಿವೆ ಎಂದರೆ ಅವರು ಒಂದು ಒಳ್ಳೆಯ ವಸ್ತುವನ್ನು ಸಹ ಕೆಟ್ಟದ್ದಾಗಿ ಕಾಣುತ್ತಾರೆ. ಆದುದರಿಂದ ಅವರಿಗೆ ವಿಶ್ವಾಸ ತರುವುದು ಕಷ್ಟದಾಯಕವಾಗುತ್ತದೆ. ಈ ಅರ್ಥವನ್ನು ಮುಂದಿನ ವಚನ **ವಜಅಲ್‌ನ ಅಲಾ ಖುಲೂಬಿಹಿಮ್ ಅಕಿನ್ನತನ್** ದೃಢೀಕರಿಸುತ್ತದೆ. ಅವರ ಹೃದಯಗಳ ಮೇಲೆ ಒಂದು ಪರದೆ ಅಲ್ಲ, ಬದಲು ಹಲವು ಪರದೆಗಳು ಬಿದ್ದಿವೆ. **(ತಫ್ಸೀರ್ ಕಬೀರ್, ಸಂಪುಟ-4, ಪುಟ-344, ಮುದ್ರಣ 2010 ಖಾದಿಯಾನ್)**

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ[ರ])

ದುಆವಿನ ಆಕಾಂಕ್ಷಿ:
M.B. Nasir Ahmed & Family, Bengaluru, Karnataka

*(ಪುಟ ಸಂಖ್ಯೆ 09ರ ಉಳಿದ ಭಾಗ)*

ಫಾರಸೀ ಪದ್ಯದಲ್ಲಿ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿಕೊಂಡಿದ್ದರು: ಹೃದಯವೇ, ನೀನು ಈ ಜನರ ಬಗ್ಗೆ ಕಾಳಜಿವಹಿಸು. ಎಷ್ಟಾದರೂ ಅವರು ನನ್ನ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುತ್ತಾರೆ ಎಂದು ವಾದಿಸುವವರಾಗಿರುವರು. (ಇಝಾಲ ಔಹಾಮ್ ಭಾಗ-1, ರೂಹಾನಿ ಖಝಾಇನ್, ಸಂಪುಟ-3, ಪುಟ-182)

ಆದ್ದರಿಂದ ಹಝ್ರತ್ ಪೈಗಂಬರ್(ಸ)ರೊಂದಿಗೆ ನಮಗೆ ಇರುವ ಪ್ರೇಮ, ಮುಸ್ಲಿಮರಿಗಾಗಿ ನಾವು ವಿಶೇಷವಾಗಿ ದುಆ ಮಾಡಬೇಕು ಎಂದು ಆವಶ್ಯಪಡುತ್ತದೆ. ಅಲ್ಲಾಹನು ನಮಗೆ ಅದರ ತೌಫೀಕ್ ನೀಡಲಿ – ಆಮೀನ್.

...*...*...*...

### ನಿಶ್ಚಿತಾರ್ಥದ ಸಮಯದಲ್ಲಿ ಸಿಹಿತಿಂಡಿಗಳನ್ನು ಹಂಚಲು ಅನುಮತಿ ಇದೆ, ಆದರೆ ಸಿಡಿಮದ್ದುಗಳನ್ನು ಸಿಡಿಸುವುದು ಮತ್ತು ಮನರಂಜನಾ ಕಾರ್ಯಕ್ರಮ ಇತ್ಯಾದಿಗಳನ್ನು ನಡೆಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನಿಶ್ಚಿತಾರ್ಥಗಳ ಸಮಾರಂಭದಲ್ಲಿ ಸಕ್ಕರೆ ಇತ್ಯಾದಿಗಳನ್ನು ಹಂಚಲಾಗುತ್ತದೆ ವಾಸ್ತವವಾಗಿ ಅದರ ಮೂಲ ಉದ್ದೇಶವೇನೆಂದರೆ, ಇತರ ಜನರಿಗೂ ಇದರ ಬಗ್ಗೆ ಸುದ್ದಿ ತಿಳಿಯಲಿ ಮತ್ತು ಇದರಲ್ಲಿ ಯಾವುದೇ ರೀತಿಯ ಅಡಚಣೆ ಉಂಟಾಗದಿರಲಿ ಎಂದಾಗಿದೆ. ಆದರೆ ಈಗ ಅದರ ಮೂಲ ಉದ್ದೇಶ ಕಣ್ಮರೆಯಾಗಿ ಅದರ ಸ್ಥಾನವನ್ನು ಕೇವಲ ನವೀಣಾಚರಣೆಗಳು ಪಡೆದುಕೊಂಡಿದೆ. ಮಾತ್ರವಲ್ಲ ಅದರೊಂದಿಗೆ ಇನ್ನೂ ಅನೇಕ ವಿಷಯಗಳು ಸೇರಿಕೊಂಡಿವೆ. ಆದ್ದರಿಂದ, ಅವುಗಳನ್ನು ಕಡ್ಡಾಯ ಪದ್ಧತಿಗಳೆಂದು ಪರಿಗಣಿಸಬಾರದು, ಇದರ ಬದಲು ಇದು ಮದುವೆಯ ಸಂಭಂಧಗಳನ್ನು ಕಾನೂನುಬದ್ಧಗೊಳಿಸಲು ಅಗತ್ಯವಾದ ವಿಷಯವೆಂದು ಅರಿಯಬೇಕು. ಸೃಷ್ಟಿಗಳಿಗೆ ಪ್ರಯೋಜನಕಾರಿಯಾಗುವ ವಿಷಯಗಳ ಮೇಲೆ ಶರೀಅತ್ ಎಂದು ತಡೆಯಾಗುವುದಿಲ್ಲ ಎಂಬುದನ್ನು ನೆನಪಿಡಿ, ಏಕೆಂದರೆ ಸೃಷ್ಟಿಗಳಿಗೆ ಪ್ರಯೋಜನ ನೀಡುವುದು ಶರಿಯತ್ತಿನ ಮೂಲ ಉದ್ದೇಶವಾಗಿದೆ. ಸಿಡಿಮದ್ದುಗಳು ಹಾಗೂ ಮನರಂಜನಾ ಕಾರ್ಯಕ್ರಮ ಮುಂತಾದವುಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಏಕೆಂದರೆ ಇದರಿಂದ ಸೃಷ್ಟಿಗಳಿಗೆ ಹಾನಿಯೇ ಹೊರತು ಯಾವುದೇ ಪ್ರಯೋಜನವನ್ನು ನೀಡುವುದಿಲ್ಲ."

**(ಮಲ್‌ಫೂಝಾತ್ ಸಂಪುಟ-2, ಪುಟ-310)**

### ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:-**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ-5, ಪುಟ-48-49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್-ವ-ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್[ಸ])

ದುಆವಿನ ಆಕಾಂಕ್ಷಿ:
Mubarak Ahmed Naseem & Family, Shimoga, Karnataka

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.04, Thursday, 30 November 2023, Issue No. 48

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-42ರ ಉಳಿದ ಭಾಗ ಮುಂದುವರಿಸಲಾಗಿದೆ)*

**ಖಿಲಾಫತ್ ಫ್ಲೈಟ್**

ಒದಗಿಸಲ್ಪಟ್ಟ ಬೋರ್ಡಿಂಗ್ ಮೇಲೆ ಖಿಲಾಫತ್ ಫ್ಲೈಟ್ 2022 ಎಂದು ಬರೆಯಲಾಗಿತ್ತು. ಫ್ಲೈಟ್ ಸಂಖ್ಯೆ KF-2022 ಎಂದಿತ್ತು. ಬೋರ್ಡಿಂಗ್ ಕಾರ್ಡ್‌ನ ಒಂದು ಕಡೆ ಈ ಪದಗಳು ನಮೂದಿತವಾಗಿದ್ದವು.

Ahmadiyya muslim Community
USA (100) 1920-2020
Centennial Khilafat Flight 2022
In the company of Hazrat Mirza
Masroor Ahmed Khalifatul masih 5 (atba)

ವಿಮಾನ ಹತ್ತುವ ಮೊದಲು, ಪ್ರವಾಸ ಮಾಡುವ ಎಲ್ಲಾ ಬಾಂಧವರು ವಿಮಾನದ ಮುಂದೆ ನಿಂತುಕೊಂಡಿದ್ದರು. ಹುಝೂರ್ ಅನ್ವರ್(ಅತಬಿಅ) ಆಗಮಿಸುತ್ತಿದ್ದಂತೆ ಬಾಂಧವರೆಲ್ಲರೂ ತಮ್ಮ ಪ್ರೀತಿಯ ನೇತಾರರ ಜೊತೆ ಸಾಮೂಹಿಕ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. MTA ಇವೆಲ್ಲ ದೃಷ್ಯಗಳ ಚಿತ್ರ ತಯಾರಿಸಿದ್ದರು.

12 ಗಂಟೆ 50 ನಿಮಿಷಕ್ಕೆ ಹುಝೂರ್ ಅನ್ವರ್(ಅತಬಿಅ) ವಿಮಾನ ಹತ್ತಿದರು. 12 ಗಂಟೆ 58 ಇಮಿಷಕ್ಕೆ ವಿವಾನ ಶಿಕಾಗೋವಿನ ಅಂತರರಾಷ್ಟ್ರೀಯ O'Hagre ವಿಮಾನ ನಿಲ್ದಾಣದಿಂದ ಡಲ್ಲಾಸ್‌ಗೆ ಪ್ರಯಾಣಿಸಿದರು. ಸುಮಾರು ಎರಡು ಗಂಟೆಗಳ ಪ್ರವಾಸದ ನಂತರ 2 ಗಂಟೆ 55 ನಿಮಿಷಕ್ಕೆ ಡಲ್ಲಾಸಿನ ಅಂತರಾಷ್ಟ್ರೀಯ Fort worth ವಿಮಾನ ನಿಲ್ದಾಣದ ಮೇಲೆ ಇಳಿಯಿತು. ಮತ್ತು ಇಳಿದು Taxi ಯಿಂದ Exit Gate ಗೆ ಬಂದು ನಿಂತರು. ಅಲ್ಲಿಂದ ಹೊರಗೆ ಹೋಗುವ ದೂರ ಅತ್ಯಂತ ಕಡಿಮೆ ಆಗಿತ್ತು. ಸಮೀಪವೇ ವಾಹನಗಳು ನಿಲ್ಲಿಸಿದ್ದರು.

ಹುಝೂರ್ ಅನ್ವರ್(ಅತಬಿಅ) ವಿಮಾನ ನಿಲ್ದಾಣದಿಂದ ಹೊರಗೆ ಆಗಮಿಸುತ್ತಲೇ ಸದರ್ ಜಮಾಅತ್ ಡಲ್ಲಾಸ್, ಖಾಲಿದ್ ರಹೀಮ್ ಶೇಖ್ ಸಾಹಿಬ್, ಮುಬಲ್ಲಿಗ್ ಡಲ್ಲಾಸ್ ಜ಼ಹೀರ್ ಅಹ್ಮದ್ ಖಾಜ ಸಾಹಿಬ್ ಮತ್ತು ಸದರ್ ಜಮಾಅತ್ Fort worth ಸಯೀದ್ ಚೌಧರಿ ಸಾಹಿಬ್ ಹುಝೂರ್ ಅನ್ವರ್(ಅತಬಿಅ)ಅವರಿಗೆ ಸ್ವಾಗತ ಕೋರಿದರು.

3 ಗಂಟೆ 10 ನಿಮಿಷಕ್ಕೆ ವಿಮಾನ ನಿಲ್ದಾಣದಿಂದ ಡಲ್ಲಾಸ್ ಜಮಾಅತಿನ ಕೇಂದ್ರ "ಮಸ್ಜಿದ್ ಬೈತುಲ್ ಇಕ್ರಮ್" ಕಡೆ ಪ್ರಯಾಣಿಸಿದರು. ಪೋಲೀಸ್ ವಹನಗಳು ಮತ್ತು ಇವರ ಹಲವು ಮೋಟಾರ್ ಸೈಕಲ್‌ಗಳ ತಂಡಗಳು Excort ಮಾಡಿದರು ಮತ್ತು ಜೊತೆ ಜೊತೆಯಲ್ಲೇ ರಸ್ತೆ clear ಗೊಳಿಸಿದರು ಸುಮಾರು 40 ನಿಮಿಷದ ಪ್ರಯಾಣದ ನಂತರ ಹುಝೂರ್ ಅನ್ವರ್(ಅತಬಿಅ) ಡಲ್ಲಾಸ್ ಜಮಾಅತಿನ ಕೇಂದ್ರಕ್ಕೆ ಆಗಮಿಸಿದರು.

**2 ಅಕ್ಟೋಬರ್ 2022 (ರವಿವಾರ) ಶೇಷ ವರದಿ**

**ಮಸ್ಜಿದ್ ಬೈತುಲ್-ಇಕ್ರಾಮ್‌ಗೆ ಆಗಮನ**

ತಮ್ಮ ಪ್ರೀತಿಯ ನೇತಾರರನ್ನು ಸ್ವಾಗತಿಸಲು ಮತ್ತು ಹುಝೂರೆ ಅನ್ವರ್(ಅತಬಿಅ) ಅವರ ಶುಭ ದರ್ಶನ ಪಡೆಯಲು ಡಲ್ಲಾಸ್ ಜಮಾಅತಿನ ಬಾಂಧವರು ಮತ್ತು ಅಮೇರಿಕಾದ ವಿವಿಧ ಕ್ಷೇತ್ರಗಳಿಂದ ಬಂದ ಜಮಾಅತ್ನ ಬಾಂಧವರು ನೂರಾರು ಸಂಖ್ಯೆಯಲ್ಲಿ ಮುಂಜಾನೆಯಿಂದಲೇ "ಮಸ್ಜಿದ್ ಬೈತುಲ್ ಇಕ್ರಾಮ್" ಗೆ ಬರತೊಡಗಿದ್ದರು. ಪುರುಷ-ಸ್ತ್ರೀಯರ, ಮಕ್ಕಳ ವೃದ್ಧರ ಒಂದು ದೊಡ್ಡ ಸಂಖ್ಯೆಯಿತ್ತು, ಅದು ಸಾವಿರಕ್ಕಿಂತಲೂ ಹೆಚ್ಚಾಗಿತ್ತು. ತಮ್ಮ ನೇತಾರರನ್ನು ನೋಡಲು ಆತುರಪಡುತ್ತಿದ್ದರು.

ಡಲ್ಲಾಸ್ ಸ್ಥಳೀಯ ಜಮಾಅತಿನ ಹೊರತಾಗಿ ಈ ಕೆಳಗೆ ಕಾಣಿಸಿದ ವಿವಿಧ ಕ್ಷೇತ್ರಗಳಿಂದ ಬಾಂಧವರು ಆಗಮಿಸಿದ್ದರು.

Houston, Austin, Queens, Forth worth, Tulsa, MAry Land, San Jose, north Verginia, Sandiago, South Virginia, Bay point, Central Jersy, Chicago, Lehigh Valley, Richmind, North Jersy, Port Land, OshKosh, Buffalo, Brooklyn, Milwaki, charlotte, Boston, York, Kansas City, Detroit, Philadelphia, Long Island, Sacramento, Pittsburg, Albany, Albama, Cleveland, Baltimor, Miami, Hawai, Syracus, Phoenix, Tuscana, Georgia.

ಇನ್ನು ಕೆಲವು ಜಮಾಅತುಗಳಿಂದ ಜಮಾಅತ್‌ನ ಬಾಂಧವರು ದೀರ್ಘವಾದ ಪ್ರಯಾಣವನ್ನು ಬಳಸಿ ತಮ್ಮ ಪ್ರೀತಿಯ ನೇತಾರರನ್ನು ಸ್ವಾಗತಿಸಲು ಇಲ್ಲಿ ಆಗಮಿಸಿದ್ದರು. ಮೇರಿಲೈಂಡಿನಿಂದ ಬರುವವರು 1367 ಮೈಲು, ಲಾಸ್ ಎಂಜಲಿಸ್‌ನಿಂದ ಬರುವವರು 1433 ಮೈಲು, Queens ನಿಂದ ಬರುವವರು 1578 ಮೈಲು ಮತ್ತು ಸ್ಯಾಟಲ್‌ನಿಂದ 2095 ಮೈಲು ದೀರ್ಘ ದಾರಿಯನ್ನು ಪ್ರಯಾಣಿಸಿ ತಮ್ಮ ಪ್ರೀತಿಯ ನೇತಾರರನ್ನು ನೋಡಲು ಮತ್ತು ಸ್ವಾಗತಿಸಲು ಡಲ್ಲಾಸ್ ತಲುಪಿದ್ದರು.

ಈ ಪುರುಷ ಸ್ತ್ರೀಯರಲ್ಲಿ ಒಂದು ದೊಡ್ಡ ಸಂಖ್ಯೆ ಹುಝೂರೆ ಅನ್ವರ್(ಅತಬಿಅ) ಅವರಿಗೆ ಮೊದಲನೇ ಬಾರಿಗೆ ನೋಡುವವರಾಗಿದ್ದರು. ದರ್ಶನ ಭಾಗ್ಯ ಪಡೆಯಲು ಒಂದೊಂದು ಕ್ಷಣಗಳನ್ನು ಸಹ ಕುತೂಹಲದಿಂದ ನಿರೀಕ್ಷಿಸುತ್ತಿದ್ದರು.

ಕೊನೆಗೆ ಆ ಶುಭ ಘಳಿಗೆ ಬಂದೇ ಬಿಟ್ಟಿತು. ಆಗ ಸರಿಯಾಗಿ 3:50 ಗಂಟೆ ಸಮಯಕ್ಕೆ ಅವರ ವಾಹನ ಮುಖ್ಯದ್ವಾರ ಪ್ರವೇಶಿಸಿತು.

ಹುಝೂರೆ ಅನ್ವರ್(ಅತಬಿಅ) ವಾಹನದಿಂದ ಕೆಳಗೆ ಇಳಿಯುತ್ತಲೇ ಡಲ್ಲಾಸ್ ಜಮಾಅತಿನ ಉಪಾಧ್ಯಕ್ಷರು ಶ್ರೀ ಖಾಲಿದ್ Kirk ಸಾಹಿಬ್ ಡಲ್ಲಾಸಿನ ಆಮಿಲ ಸದಸ್ಯರೊಂದಿಗೆ ಹುಝೂರೆ ಅನ್ವರ್(ಅತಬಿಅ) ಅವರಿಗೆ ಶುಭ ಕೋರಿದರು. ಇನ್ನೊಂದೆಡೆ ಜಮಾಅತ್ ಬಾಂಧವರು ನಿರಂತರವಾಗಿ ಘೋಷ ವಾಕ್ಯಗಳನ್ನು ಉಚ್ಚರಿಸುತ್ತಿದ್ದರು. ಎಲ್ಲಾ ಕಡೆಯಿಂದ ಅಸ್ಸಲಾಮು ಅಲೈಕುಂ ಹುಝೂರ್! "ಇನ್ನಿ ಮಅಕ ಯಾ ಮಸ್ರೂರ್" ಧ್ವನಿಗಳು ಮೊಳಗುತ್ತಿದ್ದವು. ಹುಝೂರೆ ಅನ್ವರ್(ಅತಬಿಅ) ತಮ್ಮ ಕೈಯನ್ನು ಬೀಸುತ್ತಾ ಎಲ್ಲರಿಗೂ ವಅಲೈಕುಂ ಅಸ್ಸಲಾಮ್ ಹೇಳಿದರು. ಎಲ್ಲೆಡೆಯಿಂದ ಜಮಾಅತ್ ಬಾಂಧವರು ಸಹ ಕೈ ಬೀಸುತ್ತಾ ತಮ್ಮ ಸಂತೋಷ ವ್ಯಕ್ತಪಡಿಸುತ್ತಿದ್ದರು. ಪ್ರತಿಯೊಬ್ಬರು ದರ್ಶನ ಭಾಗ್ಯದಿಂದ ಆನಂದಿತರಾಗುತ್ತಿದ್ದರು. ಬಹಳಷ್ಟು ಜನರ ಕಣ್ಣುಗಳು ತೇವಗೊಂಡಿದ್ದರು. ಸ್ತ್ರೀಯರು ಮತ್ತು ಹುಡುಗಿಯರು ದರ್ಶನ ಭಾಗ್ಯ ಪಡೆಯುವ ಜೊತೆಯಲ್ಲಿ ತಮ್ಮ ಕೈಗಳನ್ನು ಬೀಸುತ್ತಾ ತಮ್ಮ ಖಲೀಫರಿಗೆ ಶುಭಾಗಮನ ಹೇಳುತ್ತಿದ್ದರು.

ಹುಝೂರೆ ಅನ್ವರ್(ಅತಬಿಅ) ಅವರ ಡಲ್ಲಾಸ್‌ಗೆ ಇದು ಪ್ರಥಮ ಭೇಟಿಯಾಗಿತ್ತು. ಇಂದು ಡಲ್ಲಾಸ್ ಭೂಮಿಯು ಸಹ ಹಝ್ರತ್ ಅಮೀರುಲ್ ಮುಮಿನೀನರ ಪಾದಸ್ಪರ್ಷ ಭಾಗ್ಯ ಪಡೆದ ಭೂಮಿಗಳಲ್ಲಿ ಸೇರಿಯಾಗಿತ್ತು. ಈಗ ಅಲ್ಲಾಹನ ಅನುಗ್ರಹದಿಂದ ಇಲ್ಲಿಯೂ ಸಹ ಅಭಿವೃದ್ಧಿಯ ಹೊಸ ಮಾರ್ಗಗಳು ತೆರೆಯುವುವು. ಮತ್ತು ಇನ್‌ಶಾಅಲ್ಲಾಹ್ ಯಶಸ್ಸಿನ ಹಾಗೂ ಅಭಿವೃದ್ಧಿಯ ಹೊಸ ಯುಗದ ಪ್ರಾರಂಭವಾಗುವುದು.

ಹುಝೂರೆ ಅನ್ವರ್(ಅತಬಿಅ) ಅವರಿಗೆ ತಂಗಲು ಮಸ್ಜಿದ್ ಬೈತುಲ್ ಇಕ್ರಾಮಿನ ಹೊರಾಂಗಣದಲ್ಲಿರುವ ಅತಿಥಿ ಗೃಹದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಹುಝೂರೆ ಅನ್ವರ್(ಅತಬಿಅ) ಜಮಾಅತ್ ಬಾಂಧವರ ಸಾಗುತ್ತ ತಮ್ಮ ವಸತಿ ಜಾಗಕ್ಕೆ ತಲುಪಿದರು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.